Reg. No.: KARKAN/2013/52928 Post No.: KA/SK/MND/978/2020-20222



# ಶ್ರೀ ವೈಕುಂಠ ವಾರ್ತಾ

ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ

ಸಂಪುಟ : 21 ಸಂಚಿಕೆ : 01 ಮಂಡ್ಯ ಅಕ್ಟೋಬರ್ 2021 ರೂ. : 2.00 ಪುಟಗಳು : 20





ಅನಂತ ಧ್ಯಾನ ಮಂದಿರದೊಳಗೆ ಪಾದಸ್ಪರ್ಶ ಮಾಡುತ್ತಿರುವ
ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಗಳು.



ಅನಂತ ಧ್ಯಾನ ಮಂದಿರ ಉದ್ಘಾಟನೆಗೆ ಆಗಮಿಸಿದ ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಗಳು, ಹಾಗೂ ಅವಧೂತ ವಿನಯ್ ಗುರೂಜಿರವರ ಜೊತೆ ಶ್ರೀ ಶಿವಮೂರ್ತಿ ಕೀಲಾರರವರು.




ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿದ್ದ ಪ್ರಾಂಶುಪಾಲರು ಮತ್ತು ಉಪನ್ಯಾಸಕರುಗಳು




ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಂದ ಪ್ರಾರ್ಥನೆ




ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಂದ ನೃತ್ಯ ಕಾರ್ಯಕ್ರಮ.

**ಶ್ರೀ ವೈಕುಂಠ ವಾರ್ತಾ**

**ಆಧ್ಯಾತ್ಮಿಕ– ಶೈಕ್ಷಣಿಕ–ಮಾಸ ಪತ್ರಿಕೆ**

ಸಂಪುಟ : 21 | ಸಂಚಿಕೆ : 01
ಮಂಡ್ಯ | ಅಕ್ಟೋಬರ್ 2021
ಪುಟಗಳು : 20

**ಗೌರವ ಸಂಪಾದಕರು :**
**ಕೆ. ಎನ್. ರವಿ**

**ಪ್ರಕಾಶಕರು ಮತ್ತು ಸಂಪಾದಕರು :**
**ಶಿವಮೂರ್ತಿ ಕೀಲಾರ**
**ಅಧ್ಯಕ್ಷರು, ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**

**ಮುದ್ರಕರು :**
**ಶಿವಪ್ರಕಾಶ್, ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್ ಮಂಡ್ಯ**

**ವಾರ್ಷಿಕ ಚಂದಾ ವಿವರ: 150 ರೂಪಾಯಿಗಳು**

**ವಿಳಾಸ**
**ಶ್ರೀ ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್**
**5ನೇ ಕ್ರಾಸ್, ಶಂಕರನಗರ, ಮಂಡ್ಯ**

## –: ಪ ರಿ ವಿ ಡಿ :–

| ಲೇಖನಗಳು | ಪುಟ ಸಂಖ್ಯೆ |
|---|---|
| ಅನಂತ ಧ್ಯಾನ ಮಂದಿರ ಉದ್ಘಾಟನೆ ಮತ್ತು ಪೂಜ್ಯ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿ ಅನಾವರಣ | 2 |
| ಬರುವುದೂ, ಇರುವುದೂ, ನುಡಿವುದೂ ಒಂದೇ ಅದೇ ಕನ್ನಡ ಕನ್ನಡ... | 4 |
| ಗಣಿತದೊಳಗಿನ ಆಧ್ಯಾತ್ಮಿಕತೆ | 5 |
| ಶ್ರೀ ಗುರೂಜಿ ಮತ್ತು ಅಭಿನವ ಭಾರತಿ | 8 |
| ಸ್ತ್ರೀಯ ನೋವಿನ ಬದುಕು ಶ್ರಮದಿಂದ ನೆಮ್ಮದಿಯ ಬದುಕು | 11 |
| ಭಾವಯಾನ | 12 |
| ಅಭಿನವ ಭಾರತಿ ಕಾಲೇಜು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ | 13 |
| ಗೆಳೆತನವೆಂಬ ಸಂಬಂಧಗಳ ನಡುವೆ ಒಂದು ಸುತ್ತು... | 15 |
| ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿ | 16 |

# ಸಂಪಾದಕೀಯ

ನವೆಂಬರ್ ತಿಂಗಳು ಕನ್ನಡಿಗರಿಗೆ ಭಾಷೆ, ಸಂಸ್ಕೃತಿಯನ್ನು ಸ್ಮರಿಸುವ ಭಜಿಸುವ ಮಹತ್ವಪೂರ್ಣ ಮಾಸ. ಭಕ್ತಿ ಯೋಗದಲ್ಲಿ ಕನ್ನಡ ಭಾಷೆ ಸಂಪನ್ನವಾಗಿ ಬೆಳೆದಿದೆ. ದಾಸ ಶ್ರೇಷ್ಠರೂ 2500 ವರ್ಷಗಳ ಹಿಂದೆಯೇ ಕನ್ನಡ ಭಾಷೆಯನ್ನು ಸಾಮಾನ್ಯರಿಗೆ ತಿಳಿಯುವ ಹಾಗೆ ಸರಳವಾದ ಮಾತುಗಳಲ್ಲಿ ಆಧ್ಯಾತ್ಮದ ಸಂದೇಶವನ್ನು ಸಾರಿದ್ದಾರೆ.

ಕನಕ, ಪುರಂದರ, ದಾಸ ಶ್ರೇಷ್ಠರ ವಾಣಿಗಳು ಕನ್ನಡ ಭಾಷೆ ಸಮಗ್ರತೆಯನ್ನು ಸಾರಿ ಹೇಳುತ್ತವೆ. ಭಕ್ತಿಯೋಗ ಮತ್ತು ಪರಮಾತ್ಮನಲ್ಲಿ ಶರಣಾಗುವ ಮಾರ್ಗಗಳನ್ನು ದಾಸವಾಣಿಯ ಮೂಲಕ ಸಂದೇಶ ಸಾರುವ ಕೆಲಸವನ್ನು ಅಂದೇ ದಾಸ ಶ್ರೇಷ್ಠರು ಮಾಡಿದ್ದಾರೆ.

ಕನ್ನಡ ಭಾಷೆಗೆ ಆಧ್ಯಾತ್ಮದ ಜೀವಂತಿಕೆ ತುಂಬಿಸಿದೆ. ಭಕ್ತಿಯೋಗ ಇಂದಿಗೂ ಪ್ರಸ್ತುತವಾಗಿದೆ. ದೇವರನ್ನು ಸ್ಮರಿಸುವ, ಭಜಿಸುವ ಮನೆ, ಮನಗಳಲ್ಲಿ ಕನ್ನಡದ ಕಂಪು ಇಂದಿಗೂ ಪಸರಿಸಿದೆ. ಭಾಷೆ ಒಂದು ಸಂವಹನ. ಮಾತೃಭಾಷೆಯಲ್ಲಿ ದೇವರನ್ನು ಅತ್ಯಾಪ್ತ ಮಾಡಿಕೊಳ್ಳುವ ಮಾತೃಭಾಷೆಯಲ್ಲಿನ ಭಜನೆ ಕೀರ್ತನೆಗಳು, ಸಂಕೀರ್ತನೆಗಳು ಕನ್ನಡ ಭಾಷೆಯ ಸಮಗ್ರತೆಯನ್ನು ಸಾರಿ ಹೇಳಿದೆ.

ಸಂಸ್ಕೃತಿ ಮತ್ತು ಕನ್ನಡ ಅತ್ಯಂತ ಪ್ರಾಚೀನ ಭಾಷೆ. ಕನ್ನಡದ ಪಂಪ, ಪೊನ್ನ, ಜನ್ನ, ರನ್ನರ ಕಾಲದಿಂದಲೂ ಹಿಡಿದು ಕುವೆಂಪು, ಮಾಸ್ತಿ, ಬೇಂದ್ರೆ ಸೇರಿದಂತೆ ಅಸಂಖ್ಯಾತ ಉದ್ದಾವ ಕವಿ ಶ್ರೇಷ್ಠರು, ಸಾಹಿತಿಗಳೂ ಕನ್ನಡ ಭಾಷೆಗೆ ಜೀವಂತಿಕೆ ತುಂಬುವ ಕೆಲಸ ಮಾಡಿದ್ದಾರೆ.

ನವೆಂಬರ್ ತಿಂಗಳ ಕನ್ನಡ ರಾಜ್ಯೋತ್ಸವವನ್ನು ರಾಜ್ಯದ ಎಲ್ಲೆಡೆ ಸಂಭ್ರಮ, ಸಡಗರದಿಂದ ಆಚರಿಸಲಾಗುತ್ತಿದೆ. ಆದರೆ ಕನ್ನಡದ ಮನೆ – ಮನಗಳಲ್ಲಿ, ಶಿಕ್ಷಣದ ವ್ಯವಸ್ಥೆಯಲ್ಲಿ ಕನ್ನಡೀಕರಣ ನಿಧಾನವಾಗಿ ಮಾಯವಾಗುತ್ತಿದೆ. ಮಾತೃಭಾಷೆಯಲ್ಲಿ ಕನ್ನಡೀಕರಣ ನಿಧಾನವಾಗಿ ಮಾಯವಾಗುತ್ತಿದೆ. ಮಾತೃಭಾಷೆಯಲ್ಲಿ ನೀಡುವ ಶಿಕ್ಷಣ, ಮಗುವಿನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರುತ್ತದೆ. ಈ ಕಾರಣಕ್ಕಾಗಿ ಶೈಕ್ಷಣಿಕ ಎಲ್ಲಾ ಹಂತಗಳಲ್ಲಿ, ಆಡಳಿತ ವ್ಯವಸ್ಥೆಯಲ್ಲಿ ಕನ್ನಡವನ್ನು ಖಡ್ಡಾಯಗುಳಿಸುವ ಪ್ರಯತ್ನಗಳು ನಡೆಯಬೇಕು.

**ಶ್ರೀ ಶಿವಮೂರ್ತಿ ಕೀಲಾರ**
**ಅಧ್ಯಕ್ಷರು, ವೆಂಕಟೇಶ್ವರ ಚಾರಿಟಬಲ್ ಟ್ರಸ್ಟ್ (ರಿ)**
**ಪ್ರಧಾನ ಕಾರ್ಯದರ್ಶಿ ಅಭಿನವ ಭಾರತಿ ಶಿಕ್ಷಣ ಟ್ರಸ್ಟ್ (ರಿ). ಮಂಡ್ಯ.**

# ಅನಂತ ಧ್ಯಾನ ಮಂದಿರ ಉದ್ಘಾಟನೆ ಮತ್ತು ಪೂಜ್ಯ ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿರವರ ಪುತ್ಥಳಿ ಅನಾವರಣ

***ಮುಂದುವರೆದ ಭಾಗ...***

ದಿವ್ಯ ಸಾನಿಧ್ಯ ವಹಿಸಿದ್ದ ಸುತ್ತೂರು ಶ್ರೀ ಕ್ಷೇತ್ರ, ಸುತ್ತೂರು ಮಠದ ಪೀಟಾಧಿಪತಿಗಳಾದ ಮೈಸೂರು ಜಿಲ್ಲೆಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಮಹಾಸ್ವಾಮೀಜಿರವರು ತಮ್ಮ ಆಶಿರ್ವಚನದಲ್ಲಿ ಶ್ರೀ ಅನಂತ ಕುಮಾರ ಸ್ವಾಮೀಜಿರವರ ನಿಸ್ವಾರ್ಥ ಸೇವೆಯ ಬಗ್ಗೆ ಸಂತಸ ವ್ಯಕ್ತಪಡಿಸಿದರು. ಮೈಸೂರಿಗೆ ವರ್ಗಾವಣೆ ಆಗಿ ಬಂದ ಅಧಿಕಾರಿಗಳು



ನಿವೃತ್ತಿಯಾದ ಬಳಿಕ ಬೇರೆಲ್ಲೂ ಹೋಗದೇ ಮೈಸೂರಿನಲ್ಲೇ ಉಳಿಯುವಂತೆ ಮಂಡ್ಯಕ್ಕೆ ಯಾರಾದರೂ ಸಂತರು ಬಂದರೆ ಅವರು ಮಂಡ್ಯ ಬಿಟ್ಟು ಹೋಗದಿರುವುದಕ್ಕೆ ಅನಂತ ಕುಮಾರ ಸ್ವಾಮೀಜಿಯವರೇ ಸಾಕ್ಷಿ. ಶ್ರಿ ಸ್ವಾಮೀಜಿಯವರು ಎಲ್ಲರಂತೆ ಮಂಡ್ಯಕ್ಕೆ ಬಂದು ನೆಲೆಸಿದವರಲ್ಲ. ಅವರು ಸಮಾಜಕ್ಕೆ ಅನುಕೂಲ ಆಗುವಂತಹ, ಸಮಾಜಕ್ಕೆ ಯಾವತ್ತೂ ನೆನೆಯುವಂತ ಮಹತ್ಕಾರ್ಯವನ್ನು ಮಾಡಿ ಮಂಡ್ಯಕ್ಕೆ ಅತ್ಯುತ್ತಮ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ. ಶ್ರೀ ಸ್ವಾಮೀಜಿರವರು ಬಹಳ ವಿನಯಶೀಲರಾಗಿದ್ದರು. ಮೊದಲಿಗೆ ವೆಂಕಟೇಶ್ವರ ಧ್ಯಾನ ಕೇಂದ್ರವನ್ನು ಸ್ಥಾಪಿಸಿ ಅನಂತರ ಅಭಿನವ ಭಾರತಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಬೆಳೆಸಿದರು. ಅವರು ಭೌತಿಕ ಹಾಗೂ ಮಾನಸಿಕ ಯೋಗವನ್ನು ಮಾಡುತ್ತಿದ್ದರು. ಅವರ ಧ್ಯಾನ ಕೇಂದ್ರದಲ್ಲಿ ಧ್ಯಾನ ದೀಕ್ಷೆಯನ್ನು ಪಡೆದ ಅನೇಕ ಜನ ಜೀವನದಲ್ಲಿ ಸಂತೋಷದ ಬದುಕನ್ನು ನಡೆಸುತ್ತಿದ್ದಾರೆ. ಮತ್ತು ವಿದೇಶಗಳಲ್ಲೂ ನೆಲೆಸಿ ಮಹತ್ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಸರಳವಾದ ಉಡುಗೆ ತೊಡುಗೆಗಳಿಂದ ಯಾವಾಗಲೂ ಭಗವಂತನ ನಾಮಸ್ಮರಣೆ ಮಾಡುತ್ತಾ ಮಂಡ್ಯದ ಜನರ ಪ್ರೀತಿ ಪಾತ್ರರಾಗಿದ್ದರು. ತಮ್ಮ ಹಲವಾರು ಶಿಕ್ಷಣ ಸಂಸ್ಥೆಗಳ ಮೂಲಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮತ್ತು ಗುಣವಂತರನ್ನಾಗಿ ಮಾಡಿದರೆ ಆ ಮಕ್ಕಳು ಮುಂದೆ ದೇಶ ಕಟ್ಟುವ ಸೇವೆಯಲ್ಲಿ ತೊಡಗುತ್ತಾರೆ ಎಂಬ ಮಾತಿನಲ್ಲಿ ನಂಬಿಕೆ ಇಟ್ಟಿದ್ದರು.ಧ್ಯಾನ ಕೇಂದ್ರ ಮಹತ್ವವನ್ನು ತಿಳಿಸುತ್ತಾ ಧ್ಯಾನ ಮಾಡುವುದರಿಂದ ಹೊರ ಜಗತ್ತನ್ನು ಮರರೆಯುವಂತ

ಅವ್ಯಕ್ತವಾದ, ಅನಂತವಾದ ಸಂತೋಷ, ತೃಪ್ತಿಯನ್ನು ಅನುಭವಿಸಬಹುದು.ಮನುಷ್ಯನ ಜೀವನದಲ್ಲಿ ಎಷ್ಟೇ ಜಂಜಾಟಗಳಿರಬಹುದು, ಎಷ್ಟೇ ಕೆಲಸದ ಒತ್ತಡಗಳಿರಬಹುದು ದಿನಕ್ಕೆ ಸ್ವಲ್ಪ ಹೊತ್ತಾದರೂ ಧ್ಯಾನ ಮಾಡುವುದರಿಂದ ಆತ್ಮ ನಿರೀಕ್ಷೆಯನ್ನು ಪಡೆದು ಶಾಂತಿ, ನೆಮ್ಮದಿಯನ್ನು ಪಡೆಯಬಹುದಾಗಿದೆ. ಆ ಕಾರಣಕ್ಕಾಗಿ ನಿರ್ಮಿಸಿದ ಧ್ಯಾನ ಕೇಂದ್ರವನ್ನು ಸಮಪ್ಕವಾಗಿ ಬಳಸುವಂತೆ ಮಂಡ್ಯ ಜನತೆಗೆ ಹಿತವಚನವನ್ನು ನೀಡಿದರು.



ಇತ್ತೀಚಿನ ದಿನಗಳಲ್ಲಿ ಶ್ರೀ ಸ್ವಾಮೀಜಿರವರಿಗೆ ಕಾಡುತ್ತಿದ್ದ ಸಮಸ್ಯೆ ಏನೆಂದರೆ ತಾನು ಕಟ್ಟಿ ಬೆಳೆಸಿದ ಸಂಸ್ಥೆಯನ್ನು ಯಾರು ಮುನ್ನಡೆಸುತ್ತಾರೆಂಬುದುದಾಗಿತ್ತು. ಅದಕ್ಕೆ ಪೂರಕವಾಗಿ ಶ್ರೀ ಶಿವಮೂರ್ತಿ ಕೀಲಾರರವರು ಅಮೇರಿಕಾದಿಂದ ಹಿಂತಿರುಗಿ ಶ್ರೀ ಸ್ವಾಮೀಜಿಯವರ ಎಲ್ಲಾ ಶಿಕ್ಷಣ ಸಂಸ್ಥೆಗಳ ಜವಬ್ದಾರಿಯನ್ನು ವಹಿಸಿಕೊಂಡು ಮುನ್ನಡೆಸಿದರು. ಎಲ್ಲಾ ಸಮೂಹ ಸಂಸ್ಥೆಗಳಿಗೆ ಆಧುನಿಕ ಸ್ಪರ್ಶವನ್ನು ಕೊಟ್ಟು ಗುಣಾತ್ಮಕವಾಗಿ ನಡೆಸಿಕೊಂಡು ಹೂಗುತ್ತಿರುವುದಕ್ಕೆ ಶ್ರೀ ಶಿವಮೂರ್ತಿ ಕೀಲಾರರವರನ್ನು ಅಭಿನಂದಿಸಿದರು.

ಶ್ರೀ ಶಿವಮೂರ್ತಿ ಕೀಲಾರ ಮತ್ತು ಎಲ್ಲಾ ಆಡಳಿತ ಮಂಡಳಿಯ ಸದಸ್ಯರು ಸಂಘಟಿತರಾಗಿ ಶ್ರೀ ಅನಂತ ಕುಮಾರ ಸ್ವಾಮೀಜಿರವರು ಮಹೋನ್ನತ ಉದ್ದೇಶದಿಂದ ಕಟ್ಟಿರುವ ಈ ಸಂಸ್ಥೆಯನ್ನು ಹಾಗೆಯೇ ಬೆಳೆಸಿಕೊಂಡು ಹೋಗಲು ತಿಳಿಸಿದರು.ಶ್ರೀ ಸ್ವಾಮೀಜಿಯವರು ಯಾವ ಉದ್ದೇಶವನ್ನು ಇಟ್ಟುಕೊಂಡು ಧ್ಯಾನ ಕಾರ್ಯದಲ್ಲಿ ತೊಡಗಿದ್ದರೂ ಮುಂದೆಯೂ ಧ್ಯಾನ ಮಂದಿರದಲ್ಲಿ ಧ್ಯಾನದ ಪ್ರಕ್ರಿಯೆಗಳು ನಿರಂತರವಾಗಿ ನಡೆದುಕೊಂಡು ಹೋಗಲಿ ಎಂದು ಹಾರೈಸಿದರು.

ಶ್ರೀ ಅನಂತಕುಮಾರ ಸ್ವಾಮೀಜಿಯವರು ಮಂಡ್ಯಕ್ಕೆ ಬಂದ ಆರಂಭದಲ್ಲಿ ಅವರ ಜಾಗದ ನೆರವನ್ನು ನೀಡಿದ ಶ್ರೀ ಜೋಗಿಗೌಡರನ್ನು ಅಭಿನಂದಿಸಲಾಯಿತು ಹಾಗೂ ಶ್ರೀ ಸ್ವಾಮೀಜಿಯವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಸಹಾಯ ಮಾಡಿದ ಶ್ರೀ ಶಂಕರೇಗೌಡರು, ತಂಡಸನಹಳ್ಳಿ ಅವರನ್ನು ಅಭಿಸಂದಿಸಲಾಯಿತು. ಹಾಗೂ ಈ ಧ್ಯಾನ ಮಂದಿರದ ನಿರ್ಮಾಣಕ್ಕಾಗಿ ತನುಮನ ಧನಗಳಿಂದ ಸಹಾಯ ಮಾಡಿದ ಅಭಿನವ ಭಾರತಿ ಶಾಲೆಯ ಹಳೆ ವಿದ್ಯಾರ್ಥಿ ಶ್ರೀ ಆರ್ ಗಿರೀಶ್‌ರವರನ್ನು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಲಾಯಿತು.

ವೇದಿಕೆಯಲ್ಲಿ ಉಪಸ್ಥಿತರಿದ್ದು ವೇದಿಕೆಯ ವೈಭವವನ್ನು ಹೆಚ್ಚಿಸಿದ ಶ್ರೀ ರಾಮಕೃಷ್ಣಮಠದ ವಿಶ್ವವಿದಾನಂದ ಸ್ವಾಮೀಜಿ, ಕಾಂಗ್ರೆಸ್ ಮುಖಂಡರಾದ ಗಣಿಗ ರವಿ, ಬಿಜೆಪಿ ಮುಖಂಡರಾದ ಶ್ರೀ ಮಹೇಶ್ ಮತ್ತು ಶ್ರೀ ಜಯರಾಮ್ ಕೀಲಾರರವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಅಭಿನವ ಭಾರತಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಜಗನ್ನಾಥ್. ಎಸ್ ರವರು ತಮ್ಮ ವಂದನಾರ್ಪಣೆಯಲ್ಲಿ ಅಭಿನವ ಭಾರತಿ ಶಾಲೆಗೆ ಭೇಟಿ ನೀಡಿ ಶ್ರೀ ಸ್ವಾಮೀಜಿರವರ ಸೇವಾ ಕಾರ್ಯದಲ್ಲಿ ಧೈರ್ಯವನ್ನು, ಶಕ್ತಿಯನ್ನು ತುಂಬಿದ ಸಾಧು ಸಂತರುಗಳನ್ನು ಮತ್ತು ಮಹನೀಯರುಗಳನ್ನು ಸ್ಮರಿಸಿದರು. ವೇದಿಕೆಯಲ್ಲಿರುವ ಗಣ್ಯರುಗಳಿಗೆ ಶಾಲು ತೊಡಿಸಿ ಫಲ ಸಮರ್ಪಣೆ ಮಾಡುವುದರ ಮೂಲಕ ಅಭಿನಂದಿಸಲಾಯಿತು. ಈ ಸಮಾರಂಭವನ್ನು ಕುಮಾರಿ ಪವಿತ್ರ ಭಟ್‌ರವರು ಅತ್ಯಂತ ಅಚುಕಟ್ಟಾಗಿ ನಿರೂಪಿಸಿದರು.

★

# ಬರುವುದೂ, ಇರುವುದೂ, ನುಡಿವುದೂ ಒಂದೇ ಅದೇ ಕನ್ನಡ ಕನ್ನಡ...

ನಮಗಂತೂ ಬರುವುದೂ, ಇರುವುದೂ, ನುಡಿವುದೂ ಒಂದೇ ಅದೇ ಕನ್ನಡ ಕನ್ನಡ ಕನ್ನಡ...

ಇದುವರೆಗಿನ ಮಾನವ ಇತಿಹಾಸದಲ್ಲಿ, ಆತ ಇಲ್ಲಿಯವರೆಗೆ ಬೆಳೆದ ರೀತಿಯನ್ನು ಅವಲೋಕಿಸಿದಾಗ ಮನುಷ್ಯರಲ್ಲಿ ಅರಿವನ್ನು ಮೂಡಿಸುವ ಅತ್ಯಂತ ಪ್ರಬಲ ಮಾಧ್ಯಮ ಭಾಷೆ...

ಆ ಭಾಷೆಗಳಲ್ಲಿ ಆತನ ಜ್ಞಾನವನ್ನು ಆಳವಾಗಿ ಬೆಳೆಸುವುದು, ಸಂವೇದನೆ ಉಂಟುಮಾಡುವುದು ಮತ್ತು ವ್ಯಕ್ತಿತ್ವ ರೂಪಿಸುವುದು ಅವರವರ ತಾಯಿ ಭಾಷೆ ಎಂದು ಖಚಿತವಾಗಿ ಹಾಗು ವೈಜ್ಞಾನಿಕವಾಗಿ ದೃಢಪಟ್ಟಿದೆ.

ಕೋಟ್ಯಾನುಕೋಟಿ ಭಾಷೆಗಳಿದ್ದರೂ, ಅವುಗಳು ಹೆಚ್ಚು ಕಡಿಮೆ ಒಂದೇ ರೀತಿಯ ಉಗಮ, ಹಿನ್ನೆಲೆ, ಪ್ರೌಢಿಮೆ, ಶ್ರೇಷ್ಠತೆ ಹೊಂದಿದ್ದರೂ ಸಂವೇದನೆಯ ದೃಷ್ಟಿಯಿಂದ ಅವರವರ ತಾಯಿ ಭಾಷೆಗಳೇ ಸರ್ವಶ್ರೇಷ್ಠ ಎಂದು ಸಾಬೀತಾಗಿದೆ.

ಆದ್ದರಿಂದ,...

ನನ್ನ ತಾಯಿಭಾಷೆ ಕನ್ನಡವೇ ನಮಗೆ ಸರ್ವಶ್ರೇಷ್ಠ.

ಇಲ್ಲಿನ ನೀರು ನೆಲ ಗಾಳಿಯಲ್ಲದೆ, ನಮ್ಮ ತಂದೆ ತಾಯಿ ಬಂಧು ಬಳಗಗಳ ರಕ್ತ ಮಿಳಿತವಾಗಿ ನಮ್ಮನ್ನು ರೂಪಿಸಿದ ಕನ್ನಡವೇ ನಮ್ಮ ಜೀವಂತ ಅಸ್ತಿತ್ವದ ಕುರುಹು.

ಅದರಲ್ಲೂ ಶಿಕ್ಷಣ ಮಾಧ್ಯಮಕ್ಕೆ ಬಂದರೆ ತಾಯಿ ಭಾಷೆಗಿರುವ ಅದಮ್ಯ ಶಕ್ತಿ ಬೇರೆ ಯಾವ ಭಾಷೆಗೂ ಇರುವುದಿಲ್ಲ. ನಿಮಗೆ ಬೇರೆ ಭಾಷೆಗಳಲ್ಲಿ ಪಾಂಡಿತ್ಯವಿರಬಹುದು, ಪರೀಕ್ಷೆಗಳಲ್ಲಿ ಆ ವಿಷಯಗಳಲ್ಲಿ 100/100 ಅಂಕಗಳನ್ನು ಪಡೆಯಬಹುದು. ಅದು ಕೇವಲ ನಿಮ್ಮ ನೆನಪಿನ ಶಕ್ತಿಯ ಅಕ್ಷರ ಜ್ಞಾನದ, ವಿದ್ಯಾಭ್ಯಾಸ ಕ್ರಮದ ಅಂಕಗಳೇ ಹೊರತು ಅವು ನಿಮ್ಮ ವ್ಯಕ್ತಿತ್ವದ ಅರಿವಿನ ಅಂಶಗಳಲ್ಲ.

ತಾಯಿ ಭಾಷೆ ನಿಮ್ಮ ನರನಾಡಿಗಳ ಭಾವನೆಯ ಪ್ರತಿಬಿಂಬ ಎಂಬುದನ್ನು ಮರೆಯದಿರಿ. ವಿಶ್ವದ ಯಾವ ಭಾಷೆಗಳನ್ನು ಬೇಕಾದರು ಇಷ್ಟಪಡಿ, ಗೌರವಿಸಿ, ಕಲಿಯಿರಿ. ನಿಮಗೆ ಸಾಮರ್ಥ್ಯವಿದ್ದರೆ ಒಳ್ಳೆಯದು ಕೂಡ.

ಆದರೆ ಅದು ತಾಯಿ ಭಾಷೆಯಾಗಲಾರದು.

ಕನ್ನಡ, ಅಕ್ಷರಗಳನ್ನೂ ಪದಗಳನ್ನೂ ಮೀರಿ ನಮ್ಮನ್ನು ಆವರಿಸುತ್ತದೆ. ನಮ್ಮ ಕನ್ನಡ ಜ್ಞಾನ, ಕನ್ನಡ ಹೋರಾಟ, ನಮ್ಮ ಕನ್ನಡ ಸಾಹಿತ್ಯ, ಸಿನಿಮಾ, ಕಲೆ, ನಮ್ಮ ಕನ್ನಡ ಅಭಿಮಾನ ಅನವಶ್ಯಕ ತೋರಿಕೆಯಾಗಿರದೆ ಅದು ಉಸಿರಾಟದಷ್ಟೇ ಸಹಜ ಜೀವನ ಕ್ರಮವಾಗಿರಲಿ.

ಜೀನ್ಸ್ ಪ್ಯಾಂಟ್, ಪೀಜಾ ಬರ್ಗರ್, ಕಂಪ್ಯೂಟರ್, ವಿದೇಶ ವಾಸ ಏನೇ ಆಗಿರಲಿ ನಿಮ್ಮ ಖುಷಿ ನಿಮ್ಮ ಇಷ್ಟ. ಆದರೆ ನಾಲಗೆಯ ಮೇಲೆ ನಲಿಯುವ ಭಾಷೆ ಕನ್ನಡವೇ ಆಗಿರಲಿ. ಆ ಬಗ್ಗೆ ಯಾವ ಮೇಲರಿಮೆ ಕೀಳರಿಮೆ ಬೇಡವೇ ಬೇಡ.

ಸಿನಿಮಾ, ಧಾರಾವಾಹಿ, ಮಾಡೆಲಿಂಗ್ ನ ಕೆಲವು ನಟನಟಿಯರಂತೆ, ಇಂಗ್ಲಿಷ್ ಕಲಿಕೆಯಿಂದಾಗಿಯೇ ತಾವೇನೋ ಮಹಾನ್ ಶ್ರೇಷ್ಠರಂತೆ ಆಡುವ ಎಡೆಬಿಡಂಗಿ ವ್ಯಕ್ತಿತ್ವದ ತೋರಿಕೆಯ – ಹಣಗಳಿಸುವ ಕಪಟಿಗಳಂತೆ ನಾವಾಗದೆ, ಕೃತಕ ಅಭಿಮಾನ ತೋರಿಸದೆ ನಮ್ಮೆಲ್ಲರ ಸಹಜ ಸ್ವಾಭಾವಿಕ ಜೀವಭಾಷೆ ಕನ್ನಡವಾಗಲಿ.

ನಮ್ಮ ದಿನನಿತ್ಯದ ಜೀವನಶೈಲಿಯೇ ಕನ್ನಡವಾಗಲಿ.

ಹಾಗೆಯೇ ಕನ್ನಡ ಭಾಷೆಯೂ ಸಹ ನಿಂತ ನೀರಾಗಲು ಬಿಡದೆ ಆಧುನಿಕ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತಾ ಕನ್ನಡದ ಜೊತೆಗೆ ನಾವೂ ಬೆಳೆಯುತ್ತಾ ವಿಶ್ವ ನಾಗರಿಕರಾಗೋಣ.

ಸಹಜತೆಯತ್ತ ಮರಳುತ್ತಿದೆ ನನ್ನ ತಾಯಿಭಾಷೆ – ಅದೇ ಕನ್ನಡ,

ಮರಳಿ ಪಡೆಯುತ್ತಿದೆ ಮಣ್ಣಿನ ಗುಣ – ಅದೇ ಕನ್ನಡ,

ಹೊಸ ಉತ್ಸಾಹದಲ್ಲಿ ಚಿಗುರುತ್ತಿದೆ, ಚಿಮ್ಮುತ್ತಿದೆ – ಅದೇ ಕನ್ನಡ,

ಜೀನ್ಸ್ ಪ್ಯಾಂಟ್ ಹುಡುಗಿಯರ ತುಟಿಗಳಲ್ಲೂ ನಲಿಯುತ್ತಿದೆ – ಅದೇ ಕನ್ನಡ,

*12ನೇ ಪುಟಕ್ಕೆ....*


# ಗಣಿತದೊಳಗಿನ ಆಧ್ಯಾತ್ಮಿಕತೆ

ಗಣಿತ ಮತ್ತು ಆಧ್ಯಾತ್ಮ ಇವೆರಡು ಅದ್ಭುತವಾದ ಪರಿಕಲ್ಪನೆಗಳು ಪ್ರಪಂಚದ ಯಾವುದೇ ವಿಚಾರವಿರಲಿ ಅಲ್ಲಿ ಆಧ್ಯಾತ್ಮ ಒಂದಲ್ಲ ಒಂದು ವಿಧದಲ್ಲಿ ಬೆಸೆದುಕೊಂಡಿರುತ್ತದೆ. ನಾನು 26 ವರ್ಷಗಳಿಂದ ಗಣಿತ ಪಾಠ ಬೋಧಿಸುತ್ತಿದ್ದು ಗಣಿತವು ಆಧ್ಯಾತ್ಮದೊಂದಿಗೆ ಸಂಪರ್ಕಗೊಳ್ಳುವ ಪ್ರಕ್ರಿಯೆಯನ್ನು ಕಂಡು ಬೆರಗಾಗಿದ್ದೇನೆ. ಹಲವಾರು ವರ್ಷಗಳಿಂದ ತುಡಿಯುತ್ತಿರುವ ಈ ಅನುಭವವನ್ನು ಹಂಚಿಕೊಳ್ಳಲು ಸಂತೋಷವಾಗುತ್ತದೆ.

ಈ ಸಂದರ್ಭದಲ್ಲಿ ನನಗೆ ಗಣಿತ ಕಲಿಸಿದ ಗುರುಗಳಾದ ಶ್ರೀಯುತ ಶಿವಣ್ಣ ಮಾಸ್ಟರ್‌ರನ್ನು ಭಕ್ತಿಯಿಂದ ಸ್ಮರಿಸುತ್ತೇನೆ. ಎರಡನೇ ಪಿಯುಸಿವರೆಗೆ ನನಗೆ ಗಣಿತವೆಂದರೆ ಕಬ್ಬಿಣದ ಕಡಲೆಯೇ ಆಗಿತ್ತು. ಗಣಿತದಲ್ಲಿ ನಾನು ಅತ್ಯಂತ ಕಳಪೆ ವಿದ್ಯಾರ್ಥಿಯಾಗಿದ್ದೆ. ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಗಣಿತ ಪ್ರಾಧ್ಯಾಪಕರಾಗಿದ್ದ ಶ್ರೀಯುತ ಶಿವಣ್ಣ ಮಾಸ್ಟರ್ ನನಗೆ ಗಣಿತ ಶಿಕ್ಷಕರಾಗಿ ದೊರೆತಿದ್ದು ನನ್ನ ಪೂರ್ವಜನ್ಮದ ಪುಣ್ಯದ ಫಲವೆಂದೇ ಹೇಳಬೇಕು. ಒಂದೇ ವರ್ಷದಲ್ಲಿ , 11 ವರ್ಷದಲ್ಲಿ ನಾನು ಕಲಿಯದೇ ಉಳಿಸಿಕೊಂಡಿದ್ದ ಗಣಿತದ ಎಲ್ಲಾ ಅಂಶಗಳನ್ನು ನನಗೆ ಕಲಿಸಿರುವುದು ಶ್ರೀಯುತ ಶಿವಣ್ಣ ಮಾಸ್ಟರ್‌ರವರ ಅಪ್ರತಿಮ ಬೋಧನ ಕೌಶಲ್ಯಕ್ಕೊಂದು ಉದಾಹರಣೆ. ಒಂದು ವೇಳೆ ಅಂತಹ ಶಿಕ್ಷಕರು ನನಗೆ ಸಿಗದೇ ಇರುತ್ತಿದ್ದರೆ ಇಂದು ನಾನು ಗಣಿತ ಶಿಕ್ಷಕನಾಗುತ್ತಿರಲಿಲ್ಲ. ಅಂದುಅವರು ಮೂಡಿಸಿದ ಗಣಿತದ ಆಸಕ್ತಿ ಇಂದಿಗೂ ಹಾಗೆಯೇ ಉಳಿದುಕೊಂಡಿವೆ ಎಂದು ತಿಳಿಸುತ್ತಾ ಅವರಿಗೊಂದು ಭಕ್ತಿ ಪೂರ್ವಕ ಸಾಷ್ಟಾಂಗ ನಮಸ್ಕಾರಗಳು.

ರೇಖಾಗಣಿತದ ಮೂಲ ಕಲ್ಪನೆಯಲ್ಲಿ ಬಿಂದಿವಿನ ಅಗ್ರ ಸ್ಥಾನ ಬಿಂದುವೆಂದರೆ ಉದ್ದ, ಅಗಲ, ದಪ್ಪಗಳಿಲ್ಲದ ಒಂದು ಚುಕ್ಕೆ. ಬಿಂದುವಿಗೆ ಯಾವ ಆಯಾಮವೂ ಇಲ್ಲದಿರುವಾಗ ಅದು ನಮ್ಮ ಕಣ್ಣಿಗೆ ಕಾಣಲು ಹೇಗೆ ಸಾಧ್ಯ? ಎಂಬುದು ನನ್ನ ಮೂಲಭೂತ ಪ್ರಶ್ನೆ. ಬಿಂದುವು ನಿರಾಕಾರ. ನಾವು ಕಾಗದದ ಹಾಳೆಯಲ್ಲಿ ಒಂದು ಬಿಂದುವನ್ನು ಗುರುತಿಸಿದರೆ ಅದು ಚಿಕ್ಕದಾಗಿರುತ್ತದೆ. ಅದೇ ಬಿಂದುವನ್ನು ಕಪ್ಪು ಹಲಗೆಯ ಮೇಲೆ ಬರೆದರೆ ಅದು ಸ್ವಲ್ಪ ದೊಡ್ಡದಾಗುತ್ತದೆ. ಅದೇ ಬಿಂದುವನ್ನು ಮೈದಾನದಲ್ಲಿ ಬರೆದರೆ ಅದು ಇನ್ನೂ ದೊಡ್ಡದಾಗುತ್ತದೆ. ಇದರ ಅರ್ಥ, ಬಿಂದುವು ಸೂಕ್ಷ್ಮಾತಿ ಸೂಕ್ಷ್ಮವಾಗಿರಬಹುದು ಅಥವಾ ಬ್ರಹ್ಮಾಂಡದಷ್ಟು ಅದಕ್ಕೂ ಮೀರಿ ದೊಡ್ಡದಾಗಿರಬಹುದು. ಅಂದರೆ ಬಿಂದುವು ಪರಮಾತ್ಮನ ಸ್ವರೂಪವಲ್ಲವೇ? ನಿಜವಾದ ಬಿಂದು ನಮ್ಮ ಕಣ್ಣಿಗೆ ಕಾಣದಿದ್ದರೂ ನಾವು ಬಿಂದುವನ್ನು ಒಂದು ಚುಕ್ಕೆಯ ರೂಪದಲ್ಲಿ ಸಾಂಕೇತಿಕವಾಗಿ ಗುರುತಿಸುತ್ತೇವೆ.

ಹಾಗೆಯೇ ದೇವರು ನಮಗೆ ಕಾಣದಿದ್ದರೂ ಸಾಂಕೇತಿಕವಾಗಿ ವಿವಿಧ ರೂಪಗಳಲ್ಲಿ ಪೂಜಿಸುತ್ತೇವೆ. ಬಿಂದುವು ನಮ್ಮ ದೃಷ್ಟಿಗೆ ಗೋಚರಿಸದಿದ್ದರೂ ಬಿಂದುವಿನ ಅಸ್ತಿತ್ವವನ್ನು ಯಾರೂ ಅಲ್ಲಗಳೆಯಲಾರರು. ಉದಾಹರಣೆಗೆ



ಒಂದು ತ್ರಿಭುಜವನ್ನು ರಚಿಸುವಾಗ ಅದರ ಮೂರು ಬಾಹುಗಳು ಸಂಧಿಸುವ ಬಿಂದುಗಳು (ಶೃಂಗಗಳು) ಬಿಂದುವಿನ ಅಸ್ತಿತ್ವವನ್ನು ಪ್ರಕಟಿಸುತ್ತದೆ. ಅಂದರೆ ಬಿಂದುವು ಕಣ್ಣಿಗೆ ಕಾಣದಿದ್ದರೂ ಅವಶ್ಯಕವಿದ್ದಾಗಲೆಲ್ಲಾ ಅದರ ಅಸ್ತಿತ್ವ ಪ್ರಕಟಗೊಳ್ಳುತ್ತನೇ ಇರುತ್ತದೆ. ಅದೇ ರೀತಿ ಭಗವಂತನ ನಮ್ಮ ದೃಷ್ಟಿಗೆ ಗೋಚರಿಸದಿದ್ದರೂ ಅವಶ್ಯಕತೆ ಇದ್ದಾಗ ಅಂದರೆ ಭಕ್ತನು ಸಂಕಟಕ್ಕೆ ಸಿಲುಕಿದಾಗ ಪ್ರಕಟಗೊಂಡು ಆತನ ಸಂಕಟವನ್ನು ದಾರಮಾಡುತ್ತಾನೆ. ಹಾಗಿರುವಾಗ ಭಗವಂತನ ಅಸ್ತಿತ್ವಕ್ಕೆ ಬಿಂದಿವಿಗಿಂತ ದೊಡ್ಡ ಪುರಾವೆ ಬೇಕಿಲ್ಲ. ಒಂದು

ಬಿಂದುವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅದನ್ನು ಕಿರಿದುಗೊಳಿಸುತ್ತಾ ಹೋದರೆ ಅದು ಅದೃಶ್ಯವಾಗುವ ಹಂತದಲ್ಲಿ ನಮ್ಮನ್ನು ಭಗವಂತನ ಬಳಿ ಕೊಂಡೊಯ್ಯುತ್ತದೆ. ಯಾಕೆಂದರೆ ಬಿಂದುವು ಭಗವಂತನ ಸ್ವರೂಪವೇ ಆಗಿರುವುದರಿಂದ ಅದಕ್ಕೆ ಭಗವಂತನ ಅಸ್ತಿತ್ವವನ್ನು ಪ್ರಕಟಿಸುವ ಸಾಮರ್ಥ್ಯವಿದ್ದೆ ಇರುತ್ತದೆ. ಹಾಗೆಯೇ ಒಂದು ಬಿಂದುವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಅದನ್ನು ಹಿರಿದಾಗಿಸುತ್ತಾ ಹೋದರೆ ಅದು ಇಡೀ ಬ್ರಹ್ಮಾಂಡವನ್ನು ವ್ಯಾಪಿಸಬಹುದು. ಬ್ರಹ್ಮಾಂಡವೂ ಕೂಡ ಭಗವಂತನ ಸ್ವರೂಪವಲ್ಲವೇ? ಈ ಎರಡೂ ಸಂದರ್ಭಗಳಲ್ಲೂ ನಾವು ಧ್ಯಾನಸ್ಥ ಸ್ಥಿತಿಯನ್ನು ಪಡೆಯಬಹುದು. ಸರಳರೇಖೆಯಲ್ಲಿಯೂ ಒಂದು ಅದ್ಭುತವಾದ ಆಧ್ಯಾತ್ಮವಿದೆ. ಅನಂತ ಬಿಂದುಗಳು ಒಂದೇ ನೇರದಲ್ಲಿ ಬೆಸೆದುಕೊಂಡಾಗ ಅದು ಸರಳ ರೇಖೆಯಾಗುತ್ತದೆ. "ಅನಂತ" ಎಂಬ ಪರಿಕಲ್ಪನೆಯೇ ನಮಗೆ ಒಂದು ಅದ್ಭುತವಾದ ಪ್ರಪಂಚವನ್ನು ತೆರೆದಿಡುತ್ತದೆ. ವಿಷ್ಣುವಿಗಿರುವ ಹೆಸರುಗಳಲ್ಲಿ ಅನಂತವೂ ಒಂದು ಗಣಿತದಲ್ಲಿ ಬರುವ ಅನಂತ ಅಂದರೆ ಎಣಿಕೆ ಮಾಡಲಾಗದ್ದು, ಊಹೆಗೆ ನಿಲುಕದ್ದು, ವ್ಯಾಖ್ಯಾನಿಸಲಾಗದ್ದು ಎಂಬಂತಹಾ ಹಲವಾರು ಅರ್ಥವನ್ನು ಕೊಡುತ್ತದೆ. ಅನಂತರದ ಪ್ರತಿಯೊಂದು ಅರ್ಥವೂ ಭಗವಂತನ ಕಲ್ಪನೆಯನ್ನು ಹೋಲುವುದರಿಂದ ಅನಂತವೂ ಪರಮಾತ್ಮನ ಕಂಪನವನ್ನು ನೀಡದಿರದು. ನಮ್ಮೆಲ್ಲರ ಮೆಚ್ಚಿನ ಗುರುಗಳಾದ ಅನಂತ ಕುಮಾರ ಸ್ವಾಮೀಜಿಯವರ ಹೆಸರು ಅದೇ ಆಗಿರುವುದರಿಂದ ಅನಂತ ಎಂಬ ಪದ ಬಂದಾಗಲೆಲ್ಲಾ ಒಂದು ವಿಶೇಷವಾದ ಸ್ಪಂದನೆಯನ್ನು ಒಂದು ಅತಿಶಯವಾದ ಕಂಪನವನ್ನು ಪರಿಚಯಿಸುತ್ತದೆ. ಆದ್ದರಿಂದ ಒಂದು ಮತ್ತು ಅನಂತ ಈ ಪದಗಳು ಭಗವಂತನ ಸ್ವರೂಪವನ್ನು ವ್ಯಾಖ್ಯಾನಿಸುತ್ತಾ ನಮ್ಮನ್ನು ಆಧ್ಯಾತ್ಮದೆಡೆಗೆ ಸೆಳೆದೊಯ್ಯುತ್ತದೆ. ಅನಂತ ಕುಮಾರ ಸ್ವಾಮಿಜಿಯವರೊಂದಿಗಿನ ನನ್ನ ಅವಿನಾಭಾವ ಸಂಬಂಧ ಹೆಸರಿನೊಂದಿಗೂ ತಾಳೆ ಯಾಗುವುದು ನನಗೆ ಅತ್ಯಂತ ಖುಷಿಯ ವಿಚಾರ. ಅನಂತ ಕುಮಾರ ಎಂದರೆ ವಿಷ್ಣುವಿನ ಮಗ. ಚಕ್ರಿನಂದನ ಎಂದರೂ ವಿಷ್ಣುವಿನ ಮಗ. ಈ ವಿಚಾರವನ್ನು ಸ್ವಾಮೀಜಿಯವರೊಂದಿಗೆ ಹಂಚಿಕೊಂಡು ಖುಷಿ ಪಟ್ಟಿದ್ದೇನೆ. 1,2,3,4..... ಈ ರೀತಿ ಸಂಖ್ಯೆಗಳನ್ನು ಬರೆಯುತ್ತಾ ಹೋದರೆ ಅದಕ್ಕೆ ಕೊನೆಯೆಂಬುದಿಲ್ಲ. ಕೊನೆಯಿಲ್ಲದಿರುವುದೇ ಅನಂತ. ಅಂದರೆ ಸಂಖ್ಯೆಗಳೂ ಕೂಡ ನಮ್ಮನ್ನು ಭಗವಂತನ ಬಳಿಗೇ ಕರೆದೊಯ್ಯುತ್ತವೆ. ಸಂಖ್ಯೆಗಳಿಂದ ಮೊದಲ್ಗೊಂಡು ಭಗವಂತನಲ್ಲಿ ಒಂದಾಗುವ ಪ್ರಕ್ರಿಯೆಯನ್ನು ಆಧ್ಯಾತ್ಮ ಎಂದು ಕರೆದರೆ ತಪ್ಪಾಗಲಾರದು ತಾನೇ? ಸಂಖ್ಯೆಗಳು 1 ರಿಂದಾಗಲೀ ಅಥವಾ 0 ಯಿಂದಾಗಲೀ ಆರಂಭಗೊಳ್ಳುವುದಿಲ್ಲ ಅದರ ಪೂರ್ವದಲ್ಲಿಯೂ ಅನಂತ ಋಣ ಸಂಖ್ಯೆಗಳಿವೆ (–,––– ––––––4,–3,–2,–1, 0, 1,2,3,4,............) ಅಂದರೆ ಸಂಖ್ಯೆ ಎಲ್ಲಿಂದ ಆರಂಭಗೊಂಡಿದೆ? ಎಲ್ಲಿ ಅಂತ್ಯಗೊಳ್ಳುತ್ತವೆ ಎಂದು ನಿರ್ಧಿಷ್ಟವಾಗಿ ಹೇಳಲಾಗದು. ಇದು ಆದ್ಯಂತರಹಿತನಾದ ಭಗವಂತನ ಒಂದು ಸ್ವರೂಪ.

ಶೂನ್ಯವನ್ನು ಕಂಡುಹಿಡಿದವರು ಭಾರತೀಯರು. ಶೂನ್ಯವೂ ಕೂಡ ಭಗವಂತನ ಒಂದು ಸ್ವರೂಪವಾಗಿರುವುದರಿಂದ, ಭಾರತವೇ ಆಧ್ಯಾತ್ಮಿಕತೆಯ ತವರೂರು. ಸೊನ್ನೆಯು ಸಂಖ್ಯಾರೇಖೆಯಲ್ಲಿ ಅತ್ಯಂತ ಕೇಂದ್ರ ಭಾಗದಲ್ಲದ್ದು ಎಡ, ಬಲಭಾಗದಲ್ಲಿರುವ ಋಣ ಸಂಖ್ಯೆಗಳನ್ನೂ ಸಮಸಂಖ್ಯೆ ಗಳನ್ನೂ ಸಮತೋಲನ ಮಾಡುತ್ತಿದೆ ಎಂದು ಹೇಳಬಹುದು.

ಸಂಖ್ಯಾ ರೇಖೆಯು ಒಂದು ಸರಳರೇಖೆಯಾಗಿ ರುವುದರಿಂದ ಅದರಲ್ಲಿರುವ ಅನಂತ ಬಿಂದುಗಳು ಪ್ರತಿಯೊಂದು ಬಿಂದು ಒಂದೊಂದು ವಾಸ್ತವ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ. ಪ್ರತಿಯೊಂದು ವಾಸ್ತವ ಸಂಖ್ಯೆಗೂ ಸಂಖ್ಯಾರೇಖೆಯು ಮೇಲೆ ನಿರ್ಧಿಷ್ಟ ಬಿಂದುವಿನ ಸ್ಥಾನವಿರುವುದು ಒಂದು ಅಚ್ಚರಿಯೇ ಸರಿ. ಹಾಗೆಯೇ ಈ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಅವರದ್ದ ಆದ ಸ್ಥಾನ ಮತ್ತು ಅವರದ್ದೇ ಆದ ಬೆಲೆಯಿರುವ ಭಗವಂತನ ಸೂಚ್ಯವೇ ಈ ಸಂಖ್ಯಾರೇಖೆಯೆಂದರೆ ತಪ್ಪಾಗದು. ಈ ಜಗತ್ತಿನಲ್ಲಿರುವ

ಋಣಾತ್ಮಕ ವ್ಯಕ್ತಿಗಳನ್ನು (ಋಣ ಸಂಖ್ಯೆಗಳು) ಮತ್ತು ಧನಾತ್ಮಕ ವ್ಯಕ್ತಿಗಳನ್ನು (ಧನ ಸಂಖ್ಯೆಗಳು) ಶೂನ್ಯದ ಸ್ಥಾನದಲ್ಲಿ ನಿಂತು ಸಮತೋಲನ ಮಾಡುವ ರೀತಿಯೇ ಅಚ್ಚರಿ. ಜಗತ್ತಿನಲ್ಲಿ ಒಳ್ಳೆಯವರು ಕೆಟ್ಟವರು ಎಲ್ಲವೂ ಭಗವಂತನ ಸೃಷ್ಟಿಯೇ ಆಗಿರುವುದರಿಂದ, ಗಣಿತದ ಪೂರ್ಣತೆಗೆ ಎಲ್ಲಾ ಸಂಖ್ಯೆಗಳು ಹೇಗೆ ಅವಶ್ಯಕವೋ ಹಾಗೆಯೇ ಜಗತ್ತಿನ ಪೂರ್ಣತೆಗೆ ಜಗತ್ತಿನ ಸಮತೋಲನಕ್ಕೆ ವೈವಿಧ್ಯಮಯ ವ್ಯಕ್ತಿಗಳು ಅತ್ಯಾವಶ್ಯಕ. ಋಣಾತ್ಮಕ ವ್ಯಕ್ತಿಗಳ ಹೊರತಾಗಿ ಗಣಿತದ ಪರಿಕಲ್ಪನೆ ಹೇಗೆ ಅಪೂರ್ಣವೋ ಹಾಗೆಯೇ ಋಉಣಾತ್ಮಕ ವ್ಯಕ್ತಿಗಳ ಹೊರತಾಗಿ ಪ್ರಾಪಂಚಿಕ ವ್ಯವಹಾರಗಳೂ ಅಪೂರ್ಣವಾಗಿಬಿಡುತ್ತವೆ. ಸಂಖ್ಯೆಗಳೊಂದಿಗೆ ಆಡುವ ಭಗವಂತನ ಆಟ ಮಾತ್ರ ಅನನ್ಯ. ಸಂಖ್ಯಾರೇಖೆಯ ಮೇಲೆ ಅನಂತ ಸಂಖ್ಯೆಗಳಿದ್ದರೂ ಪ್ರತಿಯೊಂದು ಜೀವಿಯೂ ವೈವಿಧ್ಯಮಯ. ನಾವೆಲ್ಲರೂ

ಸೃಷ್ಟಿಯ ಒಂದು ಅಂಶವಾಗಿರುವುದರಿಂದ ಭಗವಂತನ ಸಂಖ್ಯೆಗಳೊಂದಿಗಿನ ಆಟದಲ್ಲಿ ನಾವು ಕೇವಲ ಪಾತ್ರದಾರಿಗಳು. ನಮ್ಮ ನಮ್ಮ ಪಾತ್ರಗಳನ್ನು ನಿರ್ವಹಿಸುವುದಷ್ಟೆ ನಮ್ಮ ಕೆಲಸ. ಆದ್ದರಿಂದ ಭಗವಂತನ ಈ ಆಟದಲ್ಲಿ ಸಂತೋಷದಿಂದ ಪಾಲ್ಗೊಳ್ಳಬಹುದಲ್ಲವೇ?.


ಗಣಿತ ಪಾಠ ಮಾಡುವ ಪ್ರತಿ ಹಂತದಲ್ಲೂ ಭಗವಂತನ ಇರುವಿಕೆಯ ಕಂಪನ ಉಂಟಾಗುತ್ತನೇ ಇರುತ್ತದೆ. ಉದಾಹರಣೆಗೆ ನಮಗೆಲ್ಲ ತಿಳಿದಿರುವಂತೆ ಥ ಒಂದು ಚರಾಕ್ಷರ. ಅದರ ಸಹಗುಣಕ 1. ಆದರೆ ಸಾಮಾನ್ಯವಾಗಿ x ನ್ನು 1x ಎಂದು ಬರೆಯುವುದಿಲ್ಲ. x ನ ಸಹಗುಣಕ 1ನ್ನು ನಾವು ಬರೆಯದಿದ್ದರೂ 1 ಎನ್ನುವ ಸಂಖ್ಯೆ x ನ ಸಹ ಗುಣಕವಾಗಿ ಇದ್ದೇ ಇರುತ್ತದೆ. xನಲ್ಲಿ 1 ನಮಗೆ ಕಾಣದಿದ್ದರೂ ಅದು ಇಲ್ಲವೆಂದು ಅರ್ಥವಲ್ಲ ತಾನೇ? ಅದೇ ರೀತಿ ದೇವರು ಕಾಣುವುದಿಲ್ಲವೆಂದ ಮಾತ್ರಕ್ಕೆ ಆತನ ಇರುವಿಕೆಯನ್ನು ಅಲ್ಲಗಳೆಯಲಾದೀತೆ? $3x + x = 4x$ ಎಂದು ಬರೆಯಬೇಕಾದರೆ x ನ ಸಹಗುಣಕವಾದ 1ರ ಅಸ್ಥಿತ್ವವನ್ನು ಪರಿಗಣಿಸಬೇಕು. ($3x + 1x = 4x$) ಇದರ ಬಳಿ ಅರ್ಥವೇನೆಂದರೆ ದೇವರು ನಮ್ಮ ಕಣ್ಣಿಗೆ ಕಾಣದಿದ್ದರೂ ನಮಗೆ ಅವಶ್ಯಕತೆ ಬಂದಾಗ ತನ್ನ ಅಸ್ಥಿತ್ವವನ್ನು ಪ್ರಕಟಿಸಿ ಸಹಾಯ ಮಾಡುತ್ತಾನೆ. x ನ ಸಹಗುಣಕ 1 ರ ಜ್ಞಾನವಿದ್ದರೆ ಮಾತ್ರ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಇದರ ನಿಜವಾದ ಅರ್ಥವೇನೆಂದರೆ ಭಗವಂತನ ಜ್ಞಾನ ಪ್ರಜ್ಞೆ ನಮಗಿದ್ದರೆ, ಭಗವಂತನ ಇರುವಿಕೆಯನ್ನು ಒಪ್ಪಿಕೊಂಡು ನಮ್ಮ ಭಕ್ತಿಯನ್ನು ಸಮರ್ಪಿಸುವುದಾದರೆ ನಮ್ಮ ಎಲ್ಲಾ ಸಮಸ್ಯೆಗಳನ್ನು ಭಗವಂತ ಪರಿಹರಿಸುತ್ತಾನೆ. ಅದೇ ರೀತಿಯಲ್ಲಿ x ಘಾತದ ಸ್ಥಾನದಲ್ಲಿ ಏನು ಕಾಣದಿದ್ದರೂ ಅಲ್ಲೂ ಬಿಂದೂ ಎಂಬ ಸಂಖ್ಯೆ ಇದ್ದೇ ಇದೆ.ಹಾಗೆಯೇ x ನ ಛೇಧದಲ್ಲಿ 1 ಎಂಬ ಸಂಖ್ಯೆ ಇದ್ದೇ ಇರುತ್ತದೆ. ಹಾಗಾಗಿ ಒಂದು ಎನ್ನುವ ಸಂಖ್ಯೆ ಭಗವಂತನ ಸ್ವರೂಪವಲ್ಲವೇ? ವರ್ಗಮೂಲದಲ್ಲಿನ ಸಂಖ್ಯೆ 2 ಕೂಡ ಅದೇ ರೀತಿಯ ಬಿಂದು ಸಂಖ್ಯೆ. ಯಾವುದೇ ಒಂದು ಸಂಖ್ಯೆಯ ಹಿಂದೆ (ಎಡಭಾಗ) ಏನಿದೆ? ಅಥವಾ ಯಾವುದೇ ಒಂದು ಸಂಖ್ಯೆಯ ಮುಂದೆ (ಬಲಭಾಗ) ಏನಿದೆ? ಎಂದು ಕೇಳಿದರೆ, ಗಣಿತದ ಮೂಲಭೂತ ಜ್ಞಾನವಿಲ್ಲದವರು ಏನೂ ಇಲ್ಲ ಎಂದು ಉತ್ತರಿಸುತ್ತಾರೆ. ಆದರೆ ಯಾವುದೇ ಸಂಖ್ಯೆಯ ಎಡಭಾಗದಲ್ಲಿ 0 ಇರುತ್ತದೆ. ಹಾಗೂ ಬಲಭಾಗದಲ್ಲಿ ದಶಮಾಂಶ ಬಿಂದುವಿರುತ್ತದೆ. ಹಾಗಾಗಿ ಇಲ್ಲೂ ಕೂಡ 0 ಮತ್ತು ಬಿಂದುಗಳು ಭಗವಂತನ ಅಸ್ಥಿತ್ವವನ್ನು ವ್ಯಕ್ತಪಡಿಸುತ್ತಿಲ್ಲವೇ?



**–ಮುಂದಿನ ಸಂಚಿಕೆಗೆ ಮುಂದುವರಿಯುತ್ತದೆ.**

**– ಪಿ. ಚಕ್ರೀನಂದನ್, ಶಿಕ್ಷಕರು**
**ಅಭಿನವ ಭಾರತಿ ಪ್ರೌಢಶಾಲೆ, ಆಂಗ್ಲ ಮಾಧ್ಯಮ, ಮಂಡ್ಯ.**

# ಅಸ್ತಿತ್ವದಲ್ಲಿ ನಂಬಿಕೆ



ರಾಮಕೃಷ್ಣ ಪರಮಹಂಸರು ಶ್ರದ್ಧಾಭಕ್ತಿಗೆ ಹೆಚ್ಚಿನ ಒತ್ತು ನೀಡಿ ಬೋಧಿಸುತ್ತಿದ್ದರು. ಯಾವುದೇ ವಿಚಾರವನ್ನು ಹೇಳುವಾಗ ಸಾಮತಿಗಳನ್ನು ಬಳಸುವುದು ಅವರ ಶೈಲಿಯಾಗಿತ್ತು. ಶ್ರದ್ಧೆಯ ಕುರಿತು ಪರಮಹಂಸರು ನೀಡಿದ ಅಂತಹ ಒಂದು ಬೋಧನೆ ಇಲ್ಲಿದೆ.

ಒಮ್ಮೆ ಒಬ್ಬ ವ್ಯಕ್ತಿಯು, ಸಾಧುವೊಬ್ಬರನ್ನು ಕಂಡು ತನಗೆ ಉಪದೇಶ ನೀಡಬೇಕೆಂದು ಕೇಳಿಕೊಂಡನು. ಅದಕ್ಕೆ ಆ ಸಾಧುವು 'ದೇವರನ್ನು ಹೃತ್ಪೂರ್ವಕವಾಗಿ ಪ್ರೀತಿಸು' ಎಂದರು. ಈ ಉಪದೇಶ ಆತನಿಗೆ ಸಮಾಧಾನ ಕೊಡಲಿಲ್ಲ. 'ನಾನು ದೇವರನ್ನು ನೊಡಿಯೇ ಇಲ್ಲ. ಅದರ ವಿಚಾರವಾಗಿ ನನಗೇನೂ ತಿಳಿದಿಲ್ಲ. ಇನ್ನು ಪ್ರೀತಿಸುವುದು ಹೇಗೆ!' ಎಂದು ಮರು ಪ್ರಶ್ನಿಸಿದನು.


ಅದಕ್ಕೆ ಆ 'ನೀನು ನಿನ್ನ ಜೀವನದಲ್ಲಿ ಅತಿಯಾಗಿ ಪ್ರೀತಿಸುವುದು ಯಾರನ್ನು' ಎಂದು ಕೇಳಿದರು. 'ನನಗೆ ಯಾರೂ ಇಲ್ಲ. ಕುರಿ ಕಾಯುವುದೇ ನನ್ನ ವೃತ್ತಿ. ನನ್ನ ಬಳಿ ಒಂದು ಕುರಿ ಇದೆ. ನಾನು ಅದನ್ನು ಇನ್ನಿಲ್ಲದಂತೆ ಪ್ರೀತಿಸುತ್ತೇನೆ' ಎಂದ ಆ ವ್ಯಕ್ತಿ.

'ಸರಿ, ಹಾಗಾದರೆ ಅದನ್ನೇ ಹೃತ್ಪೂರ್ವಕವಾಗಿ ಪ್ರೀತಿಸು. ದೇವರು ಅದರಲ್ಲೂ ಇರುವನು ಎಂದು ತಿಳಿದು ಪ್ರೀತಿಸು' ಎಂದರು ಸಾಧು. ಅದನ್ನು ಕೇಳಿದ ವ್ಯಕ್ತಿಯು ಅಂದಿನಿಂದಲೇ ಮೊದಲುಗೊಂಡು ತನ್ನ ಕುರಿಯಲ್ಲಿ ಭಗವಂತನನ್ನು ಭಾವಿಸುತ್ತಾ ಆರಂಭಿಸಿದನು. ಕುರಿಯನ್ನು ಪ್ರೀತಿಸುವುದರ ಜತೆಯಲ್ಲೇ, ಮನಃ ಪೂರ್ವಕವಾಗಿ ಆರಾಧಿಸ'ತೊಡಗಿದನು. ದಿನದ ಪ್ರತಿ ಕ್ಷಣವನ್ನೂ ಕುರಿಯ ಧ್ಯಾನಕ್ಕೆ ಮೀಸಲಿಟ್ಟನು, ಕುರಿಯಲ್ಲೇ ದೈವತ್ವವನ್ನು ಕಂಡುಕೊಳ್ಳಲು ಪ್ರಯತ್ನಿಸಿದನು. ಸಾಧನೆಯು ಮುಂದುವರಿಯಿತು. ಕ್ರಮೇಣ ಸಾಧನೆಯ ಅರ್ಥ ಆತನಿಗೆ ಅರಿವಾಗತೊಡಗಿತು. ಮುಂದೆ ಆತನ ಸಾಧನೆಗೆ ಕುರಿಯ ಆಧಾರವೂ ಬೇಕಾಗಲಿಲ್ಲ. ಅದು ಹಾಗೆಯೇ ಯಶಸ್ವಿಯಾಗಿ ಮುಂದುವರಿಯಿತು. ಒಮ್ಮೆ ನಮಗೆ ಅಸ್ತಿತ್ವದಲ್ಲಿ ನಂಬಿಕೆ ಹುಟ್ಟಿದರೆ ಸಾಕು, ಅನಂತರದಲ್ಲಿ ನಾಮ ರೂಪಗಳ ಆಸರೆಯೇ ಬೇಕಾಗುವುದಿಲ್ಲ. ಭಕ್ತಿ ವಿವೇಕ ಅವಶ್ಯಕತೆಯೂ ಬೇಕಾಗುವುದಿಲ್ಲ. ನಮ್ಮ ಶ್ರದ್ಧೆ, ನಂಬಿಕೆಗಳೇ ನಮ್ಮನ್ನು ಆಧ್ಯಾತ್ಮಿಕ ಉನ್ನತಿಗೆ ಏರಿಸುವವು.

★

# ಶ್ರೀ ಗುರೂಜಿ ಮತ್ತು ಅಭಿನವ ಭಾರತಿ

ಮಂಡ್ಯ ಜಿಲ್ಲೆ ದಕ್ಷಿಣ ಕರ್ನಾಟಕದ ಹೃದಯ ಪ್ರದೇಶ. ಸಾಹಿತ್ಯಕ,ಸಾಂಸ್ಕೃತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬಹಳಷ್ಟು ಎಚ್ಚರವನ್ನು ಕಾಯ್ದುಕೊಂಡು ಬಂದಿರುವ ಜಿಲ್ಲೆ. ಕಾವೇರಿ ನದಿಯ ಕರುಣೆಯಿಂದ ಸ್ವಲ್ಪ ಮಟ್ಟಿನ ಆರ್ಥಿಕ ಸ್ವಾವಲಂಬನೆಯನ್ನು ಕಂಡುಕೊಂಡಿದೆ.ಆದರೆ ಶೈಕ್ಷಣಿಕ ಕ್ಷೇತ್ರದಲ್ಲಿ ಅಂಥ ಗಮನಾರ್ಹವಾದ ಪ್ರಗತಿ ಸಾಧಿತವಲ್ಲ. ರಾಜ್ಯದ ಎಸ್. ಎಸ್.ಎಲ್.ಸಿ ಮತ್ತು ಪಿಯುಸಿ ಫಲಿತಾಂಶವನ್ನು ಗಮನಿಸುತ್ತಿದ್ದಾಗ ಅನೇಕ ವರ್ಷಗಳವರೆಗೆ ಮಂಡ್ಯ ಜಿಲ್ಲೆ ಕೊನೆಯ ಸ್ಥಾನದಲ್ಲಿ ರಾರಾಜಿಸುತಿತ್ತು. ಇತ್ತೀಚೆಗಷ್ಟೇ ಸ್ವಲ್ಪ ಪ್ರಗತಿಯನ್ನು ಸಾಧಿಸಿದ್ದರೂ ಅಷ್ಟು ಮಾತ್ರಕ್ಕೇ ಬೀಗುವಂತಿಲ್ಲ. ಕೃಷಿ ಆಧಾರಿತ ಮಂಡ್ಯ ಜಿಲ್ಲೆ ಜನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ವಿಚಾರದಲ್ಲಿ ಹಿಂದೆ ಬಿದ್ದವರಲ್ಲ. ಒಳ್ಳೆಯ ಶಿಕ್ಷಣ ಕೊಡಿಸಬೇಕು ಎಂದು ತವಕ ಪಡುವವರೇ! ಆದರೆ ಆರ್ಥಿಕ ಪರಿಸ್ಥಿತಿ ಅವಕಾಶ ಮಾಡಬೇಕಲ್ಲ. ಗಲ್ಲಿ ಗಲ್ಲಿಗಳಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳ ದುಬಾರಿ ಡೊನೆಷನ್ ಮತ್ತಿತರೆ ವೆಚ್ಚಗಳನ್ನು ಭರಿಸಲು ಸಾಧ್ಯಾವಾಗದ ಜನ ಅತ್ತ ತಿರುಗಿಯೂ ನೋಡದಂಥ ಪರಿಸ್ಥಿತಿ! ಸಾಲ – ಸೋಲ ಮಾಡಿಯಾದರೂ ಮಗುವನ್ನು ಕಾನ್ವೆಂಟ್‌ಗೆ ಸೇರಿಸಲು ಇಚ್ಚಿಸುವ ಪೋಷಕರು ತಮ್ಮ ಮಗು ಪ್ರತಿಭಾವಂತ ಎಂಬುದನ್ನು ಶಾಲೆಯ ಮುಖ್ಯಸ್ಥರ ಮುಂದೆ ಸಾಬೀತು ಪಡಿಸಬೇಕು. ಪ್ರತಿಭೆ ಗುರುತಿಸುವ ಮಾನದಂಡವಾದರೂ ಯಾವುದು? ಆ ಮಗು ಶಾಲೆಯಲ್ಲಿ ಇರಿಸಿರುವ ಕೆಲವು ಜಾತಿಯ ಕೃತಕ ಹಣ್ಣುಗಳನ್ನು ಗುರುತಿಸಬೇಕು? ಅಂಥ ಹಣ್ಣುಗಳನ್ನು ತಿನ್ನುವುದಿರಲಿ: ಕೆಲವು ಮಕ್ಕಳಂತೂ ಕಂಡೇ ಅರಿಯವು. ತಪ್ಪಲ; ಪ್ರವೇಶ ಅಲಭ್ಯ. ಕೇವಲ ಪ್ರತಿಭಾವಂತ ಮಕ್ಕಳನ್ನು ಇವರು ತಯಾರು ಮಾಡುವುದಾದರೆ, ಗ್ರಾಮಾಂತರ ಪ್ರದೇಶದ ಸಾಮಾನ್ಯ ಮಕ್ಕಳ ಭವಿಷ್ಯ ರೂಪಿತವಾಗುವುದಾದರೂ ಹೇಗೆ? ಅವರಿಗೆ ಒಳ್ಳೆಯ ಶಿಕ್ಷಣ ದೊರೆಯಬಾರದೆ?



ವಾಸ್ತವವಾಗಿ ಇಲ್ಲಿನ ಮಕ್ಕಳು ದಡ್ಡರಲ್ಲ, ಆದರೆ ಪ್ರತಿಭೆ ಪ್ರಕಟವಾಗಲು ಸೂಕ್ತ ಅವಕಾಶಗಳು ಒದಗಿ ಬಂದಿರಲಿಲ್ಲ. ಇಂಥ ಅತಂತ್ರ ಸ್ಥಿತಿಯಲ್ಲಿದ್ದ ಮಕ್ಕಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಅವರ ಭವಿಷ್ಯವನ್ನು ಸುಂದರವಾಗಿ ರೂಪಿಸುವಲ್ಲಿ ಕಳೆದ ಮೂವತ್ತೈದು ವರ್ಷಗಳಿಂದ ನಿರಂತರವಾಗಿ ದುಡಿಯುತ್ತಾ ಬಂದಿರುವುದು, ಮಂಡ್ಯ ನಗರದ ಹೆಸರಾಂತ ವಿದ್ಯಾಸಂಸ್ಥೆ 'ಅಭಿನವ ಭಾರತಿ ವಿದ್ಯಾ ಕೇಂದ್ರ' ಸಾವಿರಾರು ಮಕ್ಕಳಿಗೆ ಜ್ಞಾನದ ಉಣಿಸನ್ನು ನೀಡುತ್ತಾ ಸಮಾಜದ ಸತ್ಪ್ರಜೆಗಳನ್ನಾಗಿ ರೂಪಿಸುತ್ತಾ, ಅವರ ಜೊತೆಯಲ್ಲಿ ತಾನೂ ಕೂಡ ಸುಪುಷ್ಟವಾಗಿ ಬೆಳೆದಿರುವ 'ಅಭಿನವ ಭಾರತಿ' ಅಸ್ತಿತ್ವದ ಹಿಂದೆ ಬಹು ರೋಚಕವಾದ ಕಥೆಯೇ ಹುದುಗಿದೆ.ಇಂದು ಈ ಸಂಸ್ಥೆ ಸಾಧಿಸಿರುವ ಸಾಧನೆಯ ಹಿನ್ನೆಲೆಯಲ್ಲಿ ಒಬ್ಬ ತ್ಯಾಗ ಜೀವಿಯ, ಬ್ರಹ್ಮಚಾರಿಯ ಅವಿರತ ಹೋರಾಟವಿದೆ. ಅನುಪಮ ಛಲವಿದೆ. ನಿರಂತರ ದುಡಿಮೆ ಇದೆ. ಅವರೇ – ಜಿಲ್ಲೆಯ ಜನರ ಅಪಾರ ಗೌರವಕ್ಕೆ ಪಾತ್ರವಾಗಿರುವ ಅನಂತಕುಮಾರ ಅಲಿಯಾಸ್ ದಾದಾ. ಕೇವಲ ಹೆಸರಿನಲ್ಲಿ "ದಾದಾ" ಹೊರತು ಗಾತ್ರ ಮತ್ತು ಕೃತಿಯಿಂದಲ್ಲ. ಭಾರತೀಯ ಸನಾತನ ಸಂಸ್ಕೃತಿ ಮತ್ತು ಭವ್ಯ ಪರಂಪರೆಯ ಬಗ್ಗೆ

ಅಪಾರವಾದ ಆದರ ಮತ್ತು ಪ್ರೀತಿಯುಳ್ಳ ದಾದಾ ಉತ್ತರ ಭಾರತದ ವಾರಣಾಸಿಯವರು. ಪದವಿ ಪಡೆದ ಪ್ರಾರಂಭದಲ್ಲೇ ಸಮಾಜ ಸೇವೆಯ ದೃಢ ಸಂಕಲ್ಪ ತೊಟ್ಟು ಮನೆ ಮಠ ತೊರೆದವರು. ಹರಿ ಓಂ ಬಾಬಾ ಅವರಿಂದ ಪ್ರಭಾವಿತರಾಗಿ ಧ್ಯಾನ, ಯೋಗ, ಭಜನೆ ಭಕ್ತಿ ಮಾರ್ಗದ ಮೂಲಕ ಜೀವನದ ಸಾರ್ಥಕ್ಯ ಕಂಡುಕೊಳ್ಳಲು ಮನೆ ಮಂದಿಯಿಂದ ದೂರವಾಗಿ ಭಾರತ ಯಾತ್ರೆಯ ಸಂಕಲ್ಪ ತೊಟ್ಟು ದಕ್ಷಿಣ ಭಾರತದ ಕರ್ನಾಟಕಕ್ಕೆ ಬರುತ್ತಾರೆ.

1964 ರಲ್ಲಿ ಮಂಡ್ಯ ಜಿಲ್ಲೆಯನ್ನು ಪ್ರವೇಶಿಸಿ ಅನೇಕ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ತಾವು ಬದುಕಿನಲ್ಲಿ ಮಾಡಬೇಕೆಂದಿರುವ ಮಹತ್ ಸಾಧನೆಗೆ, ಅನುಪಮ ಸೇವಾ ಕಾರ್ಯಗಳಿಗೆ ಕರ್ನಾಟಕವೇ ಪ್ರಶಸ್ತ ಜಾಗ ಎಂದು ತೀರ್ಮಾನಿಸುತ್ತಾರೆ. ಅದರಲ್ಲೂ ಮಂಡ್ಯ ಅವರ ಮನಸ್ಸನ್ನು ತೀವ್ರವಾಗಿ ಸೆಳೆದಿರುತ್ತದೆ. ತಾವು ಗಳಿಸಿದ್ದ ಶಿಕ್ಷಣ, ಪಾಂಡಿತ್ಯ ಮತ್ತು ಲೋಕಾನುಭವಗಳನ್ನು ಮಂಡ್ಯದ ಮಣ್ಣಿನ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಏಕೆ ಸಮರ್ಥವಾಗಿ ಬಳಸಿಕೊಳ್ಳಬಾರದು? ಎಂದು ಆಲೋಚಿಸಿದವರೇ ಮಂಡ್ಯವನ್ನು ತಮ್ಮ ಪ್ರಾಯೋಗಿಕ ಕ್ಷೇತ್ರವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಒಂದು ಶಿಕ್ಷಣ ಸಂಸ್ಥೆ ಆರಂಭಿಸಲು ಯೋಚಿಸುತ್ತಾರೆ. ಆಲೋಚನೆಯೇನೋ ಉದಾತ್ತವಾದದ್ದೇ! ಆದರೆ ಅವರ ಆಶಯಗಳಿಗೆ ಒತ್ತಾಸೆ ಇರಲಿಲ್ಲ.

ಕಾಶಿಯಿಂದ ಬಂದದ್ದು ಬರಿಗೈ ದಾಸರಾಗಿ, ಭಾಷೆ ಬಾರದ ಹಿಂಸೆ, ಯಾರ ಪರಿಚಯವೂ ಇಲ್ಲ. ಜನರ ನಡೆ, ನುಡಿ, ಮನೋಭಾವ ವಿಭಿನ್ನಇರಲು ತಮಗೇ ಕ್ಷೇಮ ಎನ್ನುವ ನೆಲೆ ಇಲ್ಲ. ಆದರೆ ಗುರಿ ಉನ್ನತವಾಗಿರುವಾಗ ದಾರಿ ತಂತಾನೇ ಗೋಚರವಾಗುತ್ತದೆ. ದಾದಾ ಅವರ ಎದೆಯಾಳದ ಬಯಕೆ ಕಾರ್ಯರೂಪಕ್ಕೆ ಬರಲು ಹಲವಾರು ಅಡ್ಡಿ ಆತಂಕಗಳು ಎದುರಾದರೂ ಹಠಬಿಡದ ತ್ರಿವಿಕ್ರಮನಂತೆ ಹಿಡಿದ ಪಟ್ಟು ಸಡಿಸಲಿಲ್ಲ.

ಮಂಡ್ಯದ ಸುಭಾಷ್‌ನಗರದಲ್ಲಿ ತಾವು ವಾಸಿಸಲು ಬಾಡಿಗೆಗೆ ಹಿಡಿದಿದ್ದ ಮನೆಯಲ್ಲೇ ಅಭಿನವ ಭಾರತಿ ವಿದ್ಯಾಕೇಂದ್ರ ಎಂಬ ಕನ್ನಡ ಶಾಲೆಯ ಜೋತೆಗೆ ಒಂದು ಅನಾಥಾಲಯವನ್ನು 1977ರಲ್ಲಿ ತೆರೆದೇ ಬಿಟ್ಟರು. ಸ್ಥಳೀಯ ಕೆಲವು ಸಹೃದಯಿ ಜನರ ಸಹಕಾರ ಕೂಡ ದೊರಕಿತು. "ಈ ಸನ್ಯಾಸಿ ಶಾಲೆಯನ್ನು ಹೇಗೆ ನಿಭಾಯಿಸಬಲ್ಲ? ಯಾರು ಇವನ ಹತ್ತಿರ ಮಕ್ಕಳನ್ನು ಸೇರಿಸುತ್ತಾರೆ" ಎಂದು ಮೂಗು ಮರಿದವರೇ ಬಹಳ. ಏನೋ ಹೇಳುತ್ತಿದ್ದಾನೆ, ನೋಡೋಣ ಎಂದು ಒಂದಷ್ಟು ಹಣ ಸಹಾಯವನ್ನು ಮಾಡಿದರು. ದಾದಾ ಸ್ಥಾಪಿಸಿರುವ ನೂತನ ಶಾಲೆಯ ಭವಿಷ್ಯದ ಬಗ್ಗೆ ಅಂತಹ ಖಚಿತ ಕಲಪನೆ ಆ ಜನಕ್ಕಿರಲಿಲ್ಲ. ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಕಾಟಾಚಾರಕ್ಕೆಂಬಂತೆ ಜೊತೆಯಲ್ಲಿದ್ದರು. ಆರಂಭದಲ್ಲಿ ಇಪತ್ತು ರೂಪಾಯಿಗಳನ್ನು ನೀಡಿ ಬೋರ್ಡ್ ಬರೆಸಿಕೊಟ್ಟವರು ಇನ್ಯಾರೋ? ಇಂಥ ಸ್ಥಿತಿಯಲ್ಲಿರುವ ಶಾಲೆಗೆ ಮಕ್ಕಳು ಬರುತ್ತಾರೆಯೇ? ಪೋಷಕರ ಗಮನ ಹರಿಸಲು ಸಾಧ್ಯವೇ? ಬಡಪಟ್ಟಿಗೆ ಸೋಲನ್ನು ಒಪ್ಪುವ ಜಾಯಮಾನ ದಾದಾ ಅವರದ್ದಲ್ಲ. ಮನೆ ಮನೆ ತಿರುಗಿದರು. 34 ಮಕ್ಕಳನ್ನು ಸೇರಿಸಿದರು. ಪೋಷಕರಿಗೂ ತಾತ್ಸಾರ, ತಮ್ಮ ಮಕ್ಕಳನ್ನು ಕಾನ್ವೆಂಟ್‌ಗಳಲ್ಲಿ ಓದಿಸಲಾಗದೇ ಕೈಚೆಲ್ಲಿ ಕೂತಿದ್ದವರು ಮಕ್ಕಳು ಮನೆಯಲ್ಲಿರುವ ಬದಲಿಗೆ ಈ ಸನ್ಯಾಸಿಯ ಹತ್ತಿರ ಇದ್ದು ಅದೇನು ಕಡಿದು ಕಟ್ಟೆ ಹಾಕ್ತಾರೋ? ನೋಡೋಣ. ಎಂದು ಉಪೇಕ್ಷೆ ಮಾಡಿದ್ದವರು. ಈ ಮಕ್ಕಳಲ್ಲಿ ಏಳು ಮಂದಿ ಅನಾಥ ಮಕ್ಕಳೂ ಸೇರಿದ್ದರು.

ದಾದಾ ಎದೆಗುಂದಲಿಲ್ಲ. ಜೋಳಿಗೆ ಹಿಡಿದರು. ತಾವೇ ಶಿಕ್ಷಕರಾಗಿ ಬೆತ್ತ ಹಿಡಿದರು. ಶಾಲೆಯ ಸ್ವಚ್ಛತೆಗೆ ಪೊರಕೆ ಹಿಡಿದರು. ಅನಾಥ ಮಕ್ಕಳಿಗೆ ಉಣಬಡಿಸಲು ಸೌಟು ಹಿಡಿದರು. ಮಕ್ಕಳ ಜೊತೆಯಲ್ಲೇ ಆಟ. ಊಟ, ಮಾತು–ಕತೆ, ವಾಸ, ನಿದ್ರೆ, ಮಗುವಿನೋಡನೆ ಮಗುವಾಗಿ ಬೆಳೆದು ಒಂದು ವರ್ಷದೊಳಗೆ ಮಕ್ಕಳ ಮನವನ್ನು ಗೆದ್ದರು. ಭಾರತೀಯ ಸನಾತನ ಸಂಸ್ಕೃತಿಯ ತಳಹದಿಯ ಮೇಲೆ ಮಕ್ಕಳಿಗೆ ನೀಡುತ್ತಾ ಜೊತೆ ಜೊತೆಗೆ ಬೌದ್ಧಕ. ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಕ್ಕೂ ಒತ್ತು ಕೊಡುತ್ತಾ, ಭಾವಿ ಪ್ರಜೆಗಳನ್ನು ಸುಸಂಸ್ಕೃತರನ್ನಾಗಿ ರೂಪಿಸುವುದು ತಮ್ಮ ಬದುಕಿನ ಮೂಲ ಮಂತ್ರವೆಂದು ಭಾವಿಸಿದ ದಾದಾ ಅವರ ಸಾಮರ್ಥ್ಯದ ಪರಿಚಯ ಇಂದು ವರ್ಷದೊಳಗೇ ಮಂಡ್ಯದ ನಾಗರಿಕರಿಗಾಯಿತು. ವರ್ಷದಿಂದ ವರ್ಷಕ್ಕೆ ಸಂಖ್ಯೆ ಏರುತ್ತಾ ಹೋಯಿತು. ಶಾಲೆಯ ಬಗ್ಗೆ ಮಕ್ಕಳ ಮತ್ತವರ ಪೋಷಕರ ಪ್ರಚಾರವೇ ಬಹಳವಾಯಿತು. ನಾಲ್ಕಾರು ಕಡೆ ಬಾಡಿಗೆ ಮನೆಗಳನ್ನು ಹಿಡಿದರು. ಉತ್ತಮ ಶಿಕ್ಷಣ, ವಂತಿಕೆಯ ಸೊಲ್ಲಿಲ್ಲ. ದಾದಾ ಅವರ ನಿಸ್ಪ್ರಹ ಸೇವೆ ಮತ್ತು ಸಾಧನೆಯನ್ನು ಕಣ್ಣಾರೆ ಕಂಡ ಪೋಷಕರು ಪ್ರೀತಿಯಿಂದ ಕೊಟ್ಟಂತಹ ಸಣ್ಣ–ಪುಟ್ಟ ಮೊತ್ತವು ಕನಿಷ್ಟ ಅವಶ್ಯಕತೆಗಳ ಪೂರೈಕೆಗೆ ಸಹಾಯಕವಾಯಿತು. ದಾದಾ ಅವರು ಜನನಾಯಕರ ಮತ್ತು ಸರ್ಕಾರಿ ಅಧಿಕಾರಿಗಳ ಗಮನ ಸೆಳೆದರು. ಅಭಿನವ ಭಾರತಿ ಶಾಲೆಯ ಉತ್ತಮ ಫಲಿತಾಂಶ ಸಾರ್ವಜನಿಕರ ಮೆಚ್ಚುಗೆಗೆ

ಪಾತ್ರವಾಯಿತು. ಶಾಲೆಯ ಅಸ್ತಿತ್ವಕ್ಕೆ ಎಲ್ಲರೂ ಮುಕ್ತವಾಗಿ ಸಹಕರಿಸಿದರು. ನಯನ ಮನೋಹರ ಕಟ್ಟಡಗಳು ತಲೆ ಎತ್ತಿದವು. ಅಭಿನವ ಭಾರತಿ ಶಾಲೆಯಲ್ಲಿ ಪ್ರವೇಶ ದೊರಕಿಸಿಕೊಳ್ಳುವುದೇ ಒಂದು ಪ್ರತಿಷ್ಠೆಯ ವಿಷಯವಾಗಿ ಪರಿಣಮಿಸಿತು.

ಈ 35 ವರ್ಷಗಳಲ್ಲಿ ಸಂಸ್ಥೆ ಬೆಳೆದಿರುವ ರೀತಿ ಅಚ್ಚರಿ ಹುಟ್ಟಿಸುತ್ತದೆ. ನರ್ಸರಿ ಶಾಲೆಯಿಂದ ಪದವಿ ಪೂರ್ವ ಕಾಲೇಜಿನವರಿಗೆ ವಿಸ್ತರಿಸಿದೆ, 34 ಮಕ್ಕಳಿಂದ ಆರಂಭವಾಗಿ ಇಂದು ಐದು ಸಾವಿರ ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ. ಬೋರ್ಡ್ ಬರೆಸಲು ಇಪತ್ತು ರೂಪಾಯಿಗಳಿಗೆ ಕಷ್ಟ ಪಡುತ್ತಿದ್ದ ಈ ಸಂಸ್ಥೆ ಇಂದು ಸರಿ ಸುಮಾರು ಹದಿನೈದು ಕೋಟಿ ರೂಪಾಯಿಗಳಿಗೂ ಮೀರಿದ ಚರ–ಸ್ಥಿರ ಆಸ್ತಿಗಳನ್ನು ಹೊಂದಿದೆ. ನೂರಾರು ಕುಟುಂಬಗಳ ಜೀವನಾಧಾರವಾಗಿ, ಅನೇಕ ಬಡ ಮಕ್ಕಳ ಆಶ್ರಯ ತಾಣವಾಗಿ ಉಳಿದಿದೆ. ಮಂಡ್ಯ ಮಾತ್ರವಲ್ಲದೆ ಹೊಳಲು, ಕಾಳೇನಹಳ್ಳಿ, ಹಳೇಬೂ ದನೂರು, ಗೂಳೂರುದೊಡ್ಡಿ ಮೊದಲಾದೆಡೆ ತನ್ನ ಶಾಖೆಗಳನ್ನು ತೆರೆದಿದೆ. ಗ್ರಾಮಾಂತರ ಪ್ರದೇಶದ ಮಕ್ಕಳು ತುಂಬು ಶ್ರದ್ಧೆಯಿಂದ ಇಲ್ಲಿ ಕಲಿಯುತ್ತಿವೆ. ಈ ಸಂಸ್ಥೆಯ ಶೈಕ್ಷಣಿಕ ಪ್ರಗತಿಯನ್ನು ಕಂಡು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆತವರು ಬಹಳ ಆನಂದಪಟರ್ಟು ಎರಡು ಕೊಠಡಿಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆದಿಚುಂಚನಗಿರಿಯ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳೂ ಕೂಡ ಒಂದು ಕೊಠಡಿಯನ್ನು ಕಟ್ಟಿಕೊಟ್ಟಿದ್ದಾರೆ.

ಗುರುಕುಲ ಮಾಡದಿರ ಶಿಕ್ಷಣ ನೀಡುತ್ತಾ ಭಾರತೀಯ ಉನ್ನತ ಸಂಸ್ಕೃತಿ, ಮೌಲ್ಯಗಳನ್ನು ಮಕ್ಕಳಲ್ಲಿ ಕಸಿ ಮಾಡುತ್ತಾ ಬಂದಿರುವ ಅಭಿನವ ಭಾರತಿ ಕಳೆದ ನಾಲ್ಕಾರು ವರ್ಷಗಳಿಂದ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಫಲಿತಾಂಶಗಳನ್ನು ಮಂಡ್ಯ ಜಿಲ್ಲೆಗೆ ಮೊದಲ ಸ್ಥಾನವನ್ನು ಕಾಯ್ದುಕೊಂಡು ನಂದಿದೆ. ಮಕ್ಕಳಿಗೆ ನಿತ್ಯ ಧ್ಯಾನ ಮತ್ತು ಪ್ರಾರ್ಥನೆ, ನಂತರ ಪಠ್ಯ ವಿಷಯಗಳ ಆರಂಭ. ಪಠ್ಯೇತರ ಚಟುವಟಿಕೆಗಳಲ್ಲಿಯೂ ಈ ಸಂಸ್ಥೆಯು ಬಹಳ ಮುಂದಿದೆ. ಜಿಮ್ನಾಸ್ಟಿಕ್, ಮಲ್ಲ ಕಂಬ, ಯೋಗಾಸನ, ನಾಟಕ, ಭಾಷಣ, ರಸಪ್ರಶ್ನೆ, ವಿಜ್ಞಾನ ವಸ್ತು ಪ್ರದರ್ಶನಗಳು ನಿರಂತರವಾಗಿ ಏರ್ಪಡುತ್ತವೆ. ಮಲ್ಲ ಕಂಬವನ್ನು ಮಂಡ್ಯ ಜಿಲ್ಲೆಗೆ ಮೊದಲು ಪರಿಚಯಿಸಿದ ಕೀರ್ತಿ ಅಭೀನವ ಭಾರತಿಯದು. ಮೂರು ದಿನಗಳ ಕಾಲ ಜಿಲ್ಲಾ ಮಟ್ಟದ ನಾಟಕೋತ್ಸವವನ್ನು ಮಕ್ಕಳಿಗೆ ಏರ್ಪಡಿಸುತ್ತ ಬಂದಿರುವುದು ವಿಶೇಷ. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾ ಪ್ರತಿಭೆಗಳು ಇಲ್ಲಿ ರೂಪುಗೊಂಡಿವೆ. ಆಸ್ತಿಕ ಪ್ರೇಮಿಗಳ ಅಪಾರ ಆದರಕ್ಕೆ ಪಾತ್ರವಾದಂತಹ 'ವೈಕುಂಠಾ ವಾರ್ತಾ' ಎಂಬ ಆಧ್ಯಾತ್ಮಿಕ ಮಾಸ ಪತ್ರಿಕೆ ನಿಯಮಿತವಾಗಿ ಪ್ರಕಟವಾಗುತ್ತಿದೆ. ಗೋವಿಂದ ಸಭಾಂಗಣದಲ್ಲಿ ವೆಂಕಟೇಶ್ವರನ ಧ್ಯಾನಕೇಂದ್ರ ಆರಂಭಿಸಿದ್ದಾರೆ. 'ಮಾಮೇಕಂ ಶರಣಂ ವ್ರಜ' ಎಂಬ ಧ್ಯೇಯ ವಾಕ್ಯದೊಂದಿಗೆ ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಆಧ್ಯಾತ್‌ಮಿಕ ತತ್ವ ಗಳನ್ನು ಸಮಾಜದ ಎಲ್ಲಾ ವರ್ಗದ ಜನರಿಗೆ ಯಾವುದೇ ಶುಲ್ಕವಿಲ್ಲದೆ ತಲುಪಿಸುತ್ತಾ ಬಂದಿರುವುದು ಜನಪ್ರಿಯವಾಗಿದೆ. ಸಾಧೂ ಸಂತರು, ಮಠಾಧೀಶರು, ಪಂಡುತ್ತೋಮರು ಇಲ್ಲಿಗೆ ಬಂದು ಪ್ರವಚನ ನೀಡಿ ಹೋಗಿದ್ದಾರೆ. ಇದರ ಒಂದು ಶಾಖೆ ಬೆಂಗಳೂರಿನ ವೈಯ್ಯಾಳಿಕಾವಲ್‌ನಲ್ಲಿದೆ.

"ವಿದ್ಯಾದಾನ ಸರ್ವ ಶ್ರೇಷ್ಠ ದಾನ" ಎಂಬುದು ದಾದಾ ಅವರ ಅಖಂಡ ನಿಲುವು. "ನಾವು ಕಲಿತದ್ದನ್ನು ಮಕ್ಕಳಿಗೆ ವರ್ಗಾಯಿಸುವುದು ಶಿಕ್ಷಣವಲ್ಲ; ಅವರು ಹೇಗೆ ವರ್ತಿಸಬೇಕು ಎಂದು ಕಲಿಸುವುದು ಶಿಕ್ಷಣ" ಎನ್ನುತ್ತಾರೆ. ಸಮಾಜದ ಸ್ವಾಸ್ಥ್ಯ ಹದಗೆಡುತ್ತಿರುವ ಈ ಸಂದರ್ಭದಲ್ಲಿ ಮಕ್ಕಳನ್ನು ಸತ್ಪ್ರಜೆಗಳಾಗಿ ರೂಪಿಸುವ ಗುರುತರ ಜವಾಬ್ದಾರಿ ನಮ್ಮ ಮೇಲಿದೆ ಎನ್ನುವ ದಾದಾ, ಗುರುಕುಲ ಮಾದರಿಯ ಶಿಕ್ಷಣ ನೀಡುತ್ತಾ ಈ ದೇಶದ ಸಾಂಸ್ಕೃತಿಕ ಪರಂಪರೆಗೆ ತಮ್ಮ ಅಳಿಲು ಸೇವೆ ಸಲ್ಲಿಸುತ್ತಾ ಬರುತ್ತಿದ್ದಾರೆ. ಅವರು ಹೇಳುತ್ತಾರೆ– "ಪಠ್ಯ ಮತ್ತು ಪಠ್ಯೇತರ ವಿಷಯಗಳನ್ನು ಮಕ್ಕಳಲ್ಲಿ ಸ್ಪರ್ಧಾ ಮನೋಭಾವ ಏರ್ಪಡುವಂತೆ ಮಾಡಬೇಕು. ಅವನತಿಯ ಅಂಚಿನತ್ತ ನಿಧಾನವಾಗಿ ಸಾಗುತ್ತಿರುವ ನಮ್ಮ ಭಾರತೀಯ ಪುರಾತನ ಸಂಸ್ಕೃತಿ ಮತ್ತು ಪರಂಪರೆಯ ಪುನರುಜ್ಜೀವನ ಮಕ್ಕಳಿಂದಾಗಬೇಕು. ಮಕ್ಕಳಲ್ಲಿ ಮೌಲ್ಯಗಳನ್ನು ಬಿತ್ತಿ ಬೆಳೆಸಬೇಕು. ಕೇವನ ಬುದ್ಧಿಶಕ್ತಿ ಪಡೆದರೆ ಸಾಲದು. ಆಧ್ಯಾತ್ಮ ವಿದ್ಯೆ ಪಡೆಯಬೇಕು. ನಮ್ಮಲ್ಲಿನ ಪ್ರತಿ ಮಗುಮೂ ಬುದ್ಧ, ಗಾಂಧಿ, ವಿಶ್ವೇಶ್ವರಯ್ಯನಂತವರಾಗಬೇಕು. ಈ ನಿಟ್ಟಿನಲ್ಲಿ ನಾವು ಮಾಡಬೇಕಾದ ಕಾರ್ಯ ಎಂದರೆ ಅವರಲ್ಲಿ ಹುದುಗಿರುವ ಆತ್ಮಶಕ್ತಿ ಮತ್ತು ಸುಪ್ತ ಪ್ರತಿಭೆಯನ್ನು ಉದ್ದೀಪನಗೊಳಿಸಬೇಕು. ಆ ಕೆಲಸವನ್ನು ನಾನು ಮಾಡಿಯೇ ತೀರುತ್ತೇನೆ". ಎಂದು ಆತ್ಮವಿಶ್ವಾಸದಿಂದ ನುಡಿಯುವ ದಾದಾ ಒಬ್ಬ ನಿಷ್ಕಾಮ ಯೋಗಿ. ಅವರು ಶತಾಯುಷಿಗಳಾಗಲಿ ಎಂದುದೇ ನನ್ನ ಪ್ರಾರ್ಥನೆ.

**ಡಾ|| ಹೆಚ್. ಎಸ್. ಮುದ್ದೇಗೌಡ**
ನಿವೃತ್ತ ಕನ್ನಡ ಪ್ರಾಧ್ಯಾಪಕರು,
ಪಿ.ಇ.ಎಸ್ ಕಾಲೇಜು, ಮಂಡ್ಯ.

# ಸ್ತ್ರೀಯ ನೋವಿನ ಬದುಕು ಶ್ರಮದಿಂದ ನೆಮ್ಮದಿಯ ಬದುಕು

ಒಂದು ಪುಟ್ಟ ಹಳ್ಳಿ. ಹಳ್ಳಿಯಲ್ಲಿ ಒಂದು ಕುಟುಂಬ ಆ ಕುಟುಂಬದಲ್ಲಿ ಅಜ್ಜಿ, ಅಜ್ಜ, ಅಪ್ಪ, ಅಮ್ಮ. ಇಬ್ಬರು ಹೆಣ್ಣು ಮಕ್ಕಳು ಹಾಗೂ ಮೂವರು ಗಂಡು ಮಕ್ಕಳು. ಈ ಕುಟುಂಬ ಬಡ ಕುಟುಂಬ. ಆ ಮೂವರಲ್ಲಿ ಒಬ್ಬ ಗಂಡು ಮಗ.ಅವನಿಗೆ ಮದುವೆ ಆಯಿತು. ಅವನಿಗೆ ಇಬ್ಬರು ಹೆಣ್ಣು ಮಕ್ಕಳು ಅವರು ಬಡವರು ಆಗಿದ್ದರು. ಗಂಡ, ಹೆಂಡತಿ, ಮಕ್ಕಳು ಎಲ್ಲಾರು "ಹಾಸಿಗೆ ಇದ್ದಷ್ಟು ಕಾಲು ಚಾಚು" ಎಂಬ ಗಾದೆಯಂತೆ ಆ ಒಂದು ಬಡ ಕುಟುಂಬ ಇದ್ದಷ್ಟರಲ್ಲೇ ಸುಖವಾಗಿ ಜೀವನ ಸಾಗಿಸುತ್ತಿದ್ದರು. ನಮ್ಮ ಸಂಸಾರ ಆನಂದ ಸಾಗರ ಎಂದು ಕೊಂಡು ಇದ್ದರು. ಎಲ್ಲಾ ಚೆನ್ನಾಗಿ ಇತ್ತು. ಒಂದು ದಿನ ಅವರ ಮನೆಗೆ ಹೆಂಡತಿಯ ಸ್ನೇಹಿತೆ ಬಂದಳು. ಈ ಅಲ್ಲಿ ಒಂದು ಕೆಲಸ ಇದೆ ಎಂದು ಹೇಳಿ ಹೋಗೋಣ ಚೆನ್ನಾಗಿದೆ ಅಂತೆ, ಕಷ್ಟ ಅಲ್ಲವಂತೆ ಎಂದು ತಿಳಿಸಿ ತುಂಬ ಸುಲಭವಂತೆ ಕಣೆ ಅಂತ ಹೇಳಿದರು ಇಬ್ಬರೂ ಹೋಗಿ ಕೇಳಿಕೊಂಡು ಹಾಗೂ ನೋಡಿ ಕೊಂಡು ಬರೋಣ ಎಂದು ತೀರ್ಮಾನಿಸಿದರು. ಅದರ ಮಾರನೇ ದಿನವೇ ಹೋಗಿ ನೋಡಿಕೊಂಡು ಬಮದರು. ಈಯ್ ಚೆನ್ನಾಗಿದೆ ಅಲ್ವಾ ತಿಂಗಳಿಗೆ ಸಂಬಳ 7,000 ರೂಪಾಯಿ. ಇಷ್ಟೊಂದು ನಾವು ಈ ಹಳ್ಳಿಯಲ್ಲಿ ತಿಂಗಳು ಪೂರ್ತಿ ಈ ಬಿಸಿಲಲ್ಲಿ ದುಡಿದರು ಸಿಗಲ್ಲ ಅಂತ ಆ ಸ್ನೇಹಿತೆಗೆ ಹೇಳಿ ಆ ಕೆಲಸದ ಮೇಲೆ ಹಾಗಾ ಸಂಬಳದ ಮೇಲೆ ಆಸೆ ಹಾಗೂ ಮೋಹ ಮೂಡಿ ಬರೋ ಹಾಗೆ ಮಾಡಿದಳು. ಇಬ್ಬರೂ ಒಂದು ತಿಂಗಳು ಹಾಗೂ ಒಂದು ವರ್ಷ ಆ ಕೆಲಸಕ್ಕೆ ಹೋದರು. ಇಬ್ಬರೂ ಚೆನ್ನಾಗಿದ್ದರು. ಆ ಸ್ನೇಹಿತೆ ಬಂದು "ಬಿಕ್ಕಿ ಬಿಕ್ಕಿ" ಅಳುತ್ತಾ ನಮ್ಮ ಮನೇಲಿ ತುಮಬ ಕಷ್ಟ ಇದೆ ಎಲ್ಲಿಯಾದರೂ ಸ್ವಲ್ಪ ದುಡ್ಡು ಈಸಿ ಕೊಡು ಅಂದಳು. ಅವಳು ಅಯ್ಯೋ ನನ್ನ ಸ್ನೇಹಿತೆಗೆ ಕಷ್ಟ ಅಂತೆ ಅವಳ ಗಂಡನ ಹತ್ತಿರಾನೂ ಇದರ ಬಗ್ಗೆ ಚರ್ಚೆ ಮಾಡಿದಳು, ಬೇರೆ ಅವರ ಹತ್ತಿರ ಹಣವನ್ನು ಸಾಲವಾಗಿ ಈಸಿಕೊಟ್ಟಳು ಆಮೇಲೆ ಅವಳು ಸ್ವಲ್ಪ ಚಿಕ್ಕ ಪುಟ್ಟ ಹಣಗಳನ್ನು ಕೂಡಿ ಇಟ್ಟು ಒಂದಷ್ಟು ಚಿಕ್ಕದು ಚಿನ್ನವನ್ನು ತೆಗೆದುಕೊಂಡಿದ್ದಳು.

ಅದನ್ನು ಚಿನ್ನದ ಅಂಗಡಿಗೆ ಹೋಗಿ ಆ ಚಿನ್ನವನ್ನೆಲ್ಲಾ ಅಂಗಡಿಯಲ್ಲಿ ಅಡವನ್ನು ಇಟ್ಟು ಬಂದಂತಹ ದುಡ್ಡನ್ನು ತೆಗೆದು ಕೊಂಡು ಹೋಗಿ ತೆಗೆದುಕೋ ನನ್ನ ಕೈಯಲ್ಲಿ ಆಗಿದ್ದು ಇಷ್ಟೆ. ನಿನಗೆ ಯಾವಾಗ ಆಗುತ್ತೆ ಆವಾಗ ನನಗೆ ಕೊಡು ಈಗ ಇದನ್ನು ತೆಗೆದುಕೋ ಎಂದು ಕೊಟ್ಟಳು. ಸ್ನೇಹಿತೆ ಅವಳನ್ನು ತಬ್ಬಿಕೊಂಡು ಅಳುತ್ತಾಳೆ, ನಿನ್ನ ಋಣ ಹೇಗೆ ತೀರಿಸಬೇಕು ಅಂತ ನನಗೆ ಗೊತ್ತಿಲ್ಲ. ಕಷ್ಟದ ಸಮಯದಲ್ಲಿ ಬಂದು ನನಗೆ ದೇವರ ಹಾಗೆ ಸಹಾಯ ಮಾಡಿದೆ. ನಿನಗೆ ಏನು ಹೇಳಿದರೂ ಸಾಕಾಗಲ್ಲ, ಧನ್ಯವಾದ ತಿಳಿಸಿದಳು. ಈ ಸನ್ನಿವೇಶ ಆದ ಮೇಲೆ ಸುಮಾರು ತಿಂಗಳು ಇಬ್ಬರೂ ಚೆನ್ನಾಗಿದ್ದರು. ಆಮೇಲೆ ಇಲ್ಲಿ ದುಡ್ಡನ್ನು ಕೊಟ್ಟಿದ್ದಾಳಲ್ಲ ಅವಳಿಗೆ ಕಷ್ಟ ಬಂತು. ಆಗ ದುಡ್ಡನ್ನು ಕೊಟ್ಟಿದ ಸ್ನೇಹಿತೆ ಹತ್ತಿರ ಹೋಗಿ ನನಗೆ ಸ್ವಲ್ಪ ಕಷ್ಟ ನನಗೆ ನನ್ನ ದುಡ್ಡು ಬೇಕು ಕೊಡು, ನಿನ್ನ ದಮ್ಮಯ್ಯ ಅಂತ ಅವಳ ಕಷ್ಟ ಎಲ್ಲಾನು ಹೇಳಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾಳೆ. ಆಗ ದುಡ್ಡನ್ನು ಪಡೆದುಕೊಂಡಿದ್ದ ಆ ಸ್ನೇಹಿತೆ ನೀನು ಯಾರು, ಯಾವ ಊರು, ಹೆಸರೇನು ನೀನು ಯಾವಾಗ ದುಡ್ಡನ್ನು ಕೊಟ್ಟಿದ್ದೆ ಎಂದು ಮಾತನಾಡುತ್ತಾಳೆ. ಈ ತರ ಆಯಿತಲ್ಲ, ನನ್ನ ಗಂಡ ಸುಮ್ನೆ ಬಿಡುತ್ತಾನ ಎಂದು ಅಳುತ್ತಾ ಆ ಊರನ್ನು ಹಾಗೂ ಮಕ್ಕಳನ್ನು ಬಿಟ್ಟು ಹೋಗುತ್ತಾಳೆ. ಆ ಇಬ್ಬರೂ ಹೆಣ್ಣು ಮಕ್ಕಳು ಹಾಗೂ ಗಂಡ ಅವರಷ್ಟೇ ಮನೆಯಲ್ಲಿ ಸಂಸಾರವನ್ನು ಸಾಗಿಸಿರುತ್ತಾರೆ. ಗಂಡ ಅವಳ ಹೆಂಡತಿ ಹೋದ ನೋವಿಗೆ ಹೆಚ್ಚು ಮಧ್ಯಪಾನ ಸೇವಿಸಿರುತ್ತಾನೆ. ಆ ಹೆಣ್ಣು ಮಕ್ಕಳು ಅಪ್ಪ ಹೀಗೆ, ಅಮ್ಮ ನೋಡಿದರೆ ಇದ್ದು ಇಲ್ಲದ ಹಾಗೆ ಎಂದು ಇಬ್ಬರೂ ಹೆಣ್ಣು ಮಕ್ಕಳು ಅಳುತ್ತಾ ಮನೆಯಲ್ಲಿ ಇರುತ್ತಾರೆ. ಸ್ವಲ್ಪ ದಿನಗಳ ನಂತರ ಆ ಹೆಣ್ಣು ಮಕ್ಕಳ ತಂದೆ ತನ್ನಲ್ಲಿರುವ ಎಲ್ಲಾ ಕೆಟ್ಟ ಅಭ್ಯಾಸವನ್ನು ನಿಲ್ಲಿಸಿ, ಅಮ್ಮನ ಕೊರತೆ ಇಲ್ಲದ ಹಾಗೆ ಆ ಹೆಣ್ಣು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಆ ಮಕ್ಕಳಿಗೆ ಅಪ್ಪ, ಅಮ್ಮ, ಬಂಧು–ಬಳಗ ಎಲ್ಲಾ ಅವರ ಅಪ್ಪನೇ ಆಗಿರುತ್ತಾನೆ. ಆ ಇಬ್ಬರೂ ಹೆಣ್ಣು ಮಕ್ಕಳೇ ಅಡುಗೆ ಹಾಗೂ ಮನೆ ಕೆಲಸವನ್ನೆಲ್ಲಾ ಮಾಡಿಕೊಂಡು ಶಾಲೆಗೆ ಹೋಗುತ್ತಾರೆ. ಅವರು ಒಂದು ದಿನ ಅಡುಗೆ ಮಾಡಲಿಲ್ಲ ಎಂದರೆ ಊಟಾನೆ ಇಲ್ಲ. ಆ ಇಬ್ಬರೂ ಮಕ್ಕಳು ಚೆನ್ನಾಗಿ ಕಷ್ಟಪಟ್ಟು ಹಗಲು ರಾತ್ರಿ ಎಂದು ನೋಡದೇ ನಿದ್ದೆಗೆಟ್ಟು ಚೆನ್ನಾಗಿ ಓದಿ ದೊಡ್ಡ ಹುದ್ದೆಗೆ ಸೇರಿಕೊಂಡು ಅಪ್ಪನಿಗೆ ಒಳ್ಳೆಯ ಹೆಸರು ತಂದುಕೊಡುತ್ತಾರೆ. ಅವರ ಅಪ್ಪನನ್ನು ಆ ಹೆಣ್ಣು ಮಕ್ಕಳೆ ಚೆನ್ನಾಗಿ ನೋಡಿ ಕೊಳ್ಳುತ್ತಾರೆ. ಆ ಹೆಂಡತಿ ಮಕ್ಕಳು ಕೆಲಸಕ್ಕೆ ಸೇರಿರುವುದನ್ನು ಕೇಳಿ ಆನಂದದಿಂದ ಕಣ್ಣೀರನ್ನು ಸುರಿಸುತ್ತಾ ಅವಳು ಆ ಮಕ್ಕಳ ಹತ್ತಿರವೇ ಬರುತ್ತಾಳೆ. ಎಲ್ಲಾ ಮೊದಲಿನಂತೆ ಚೆನ್ನಾಗಿ ಸುಖ ಜೀವನವನ್ನು ನಡೆಸುತ್ತಾರೆ.

ಈ ಕಥೆಯು ಪೂರ್ಣಅರ್ಥ *14ನೇ ಪುಟಕ್ಕೆ....*

# ...ಒಂದೇ ಅದೇ ಕನ್ನಡ ಕನ್ನಡ...

*...4ನೇ ಪುಟದಿಂದ*

ಟೆಕ್ಕಿಗಳ ಮನದಲ್ಲೂ ನುಡಿಯುತ್ತಿದೆ – ಅದೇ ಕನ್ನಡ,
ಕಾರ್ಪೊರೇಟ್ ಶಾಲೆಗಳಲ್ಲೂ ಮತ್ತೆ ಸಿಗುತ್ತಿದೆ ಪ್ರಾಮುಖ್ಯತೆ – ಅದೇ ಕನ್ನಡ,
ಸಿನಿಮಾ ಮಾಲ್‌ಗಳಲ್ಲೂ ಮತ್ತೆ ಕೇಳಿ ಬರುತ್ತಿದೆ – ಅದೇ ಕನ್ನಡ ,
ಬ್ಯಾಂಕು, ಅಂಚೆ ಕಚೇರಿಗಳಲ್ಲೂ ಬದಲಾಗುತ್ತಿದೆ ಧ್ವನಿಗಳು – ಅದೇ ಕನ್ನಡ,
ಆಸ್ಪತ್ರೆ, ಹೋಟೆಲ್ ಗಳಲ್ಲಿ ಸರಾಗವಾಗುತ್ತಿದೆ – ಅದೇ ಕನ್ನಡ,
ಮತ್ತೆ ಬೆಳೆಯುತ್ತಿದೆ ಟಿವಿ, ಪತ್ರಿಕೆಗಳಲ್ಲಿ ನನ್ನ ಭಾಷೆ – ಅದೇ ಕನ್ನಡ,
ಫೇಸ್ ಬುಕ್, ಟ್ವಿಟರ್, ವಾಟ್ಸಾಪ್ ಗಳಲ್ಲೂ ಮಿಂಚುತ್ತಿದೆ – ಅದೇ ಕನ್ನಡ,
ಆಶ್ಚರ್ಯವೆಂಬಂತೆ ಯುವ ಜನಾಂಗದಿಂದ ಮುದ್ದಿಸಲ್ಪಡುತ್ತಿದೆ – ಅದೇ ಕನ್ನಡ ,
ಸಾಮಾನ್ಯರಲ್ಲೂ ಠಸ್ ಪುಸ್ ಇಂಗ್ಲಿಷ್ ಬದಲು ಶಾಸ್ತ್ರೀಯವಾಗುತ್ತಿದೆ – ಅದೇ ಕನ್ನಡ,
ಮತ್ತೆ ಮರುಕಳಿಸುತ್ತಿದೆ ನಿತ್ಯೋತ್ಸವ – ಅದೇ ಕನ್ನಡ,
ಸಮೃದ್ಧವಾಗುತ್ತಿದೆ ಕಲೆ, ಸಾಹಿತ್ಯ, ಸಂಗೀತ – ಅದೇ ಕನ್ನಡ,
ಮರೆಯಾಗುತ್ತಿದೆ MUMMY DADDY,
ಹೊಮ್ಮುತ್ತಿದೆ ಅಪ್ಪ ಅಮ್ಮ – ಅದೇ ಕನ್ನಡ,
ಕಡಿಮೆಯಾಗುತ್ತಿದೆ SORRY, THANKS,
ಹೆಚ್ಚಾಗುತ್ತಿದೆ ಕ್ಷಮಿಸಿ, ಧನ್ಯವಾದಗಳು – ಅದೇ ಕನ್ನಡ,
ಕೇಳುತ್ತಿಲ್ಲ IDIOT, BASTARD, SCOUNDREL,
ಬಾಯಿಗೆ ಬರುತ್ತಿದೆ ಅಮ್ಮನ್, ಅಕ್ಕನ್, ಅಯ್ಯನ್ – ಅದೇ ಕನ್ನಡ,
ಹೊಟ್ಟೆ ಕೆಡಿಸುತ್ತಿವೆ PIZZA, BURGER,
ಆರೋಗ್ಯ ಹೆಚ್ಚಿಸುತ್ತಿವೆ ಮುದ್ದೆ, ರೊಟ್ಟಿ – ಅದೇ ಕನ್ನಡ,
ದ್ವೇಷಿಸಲ್ಪಡುತ್ತಿವೆ KFC, McDONALD,
ಪ್ರೀತಿಸಲ್ಪಡುತ್ತಿವೆ ನಾಟಿಕೋಳಿ, ತುಪ್ಪಾ ಹೋಳಿಗೆ – ಅದೇ ಕನ್ನಡ,
ನಮಗಂತೂ ಬರುವುದೂ, ಇರುವುದೂ, ನುಡಿವುದೂ ಒಂದೇ – ಅದೇ ಕನ್ನಡ ಕನ್ನಡ ಕನ್ನಡ...

**– ಸಂಗ್ರಹ**

## ಭಾವಯಾನ

ತಿಳಿಮುಗಿಲ ಚಾದರದಲಿ
ಕಾರ್ಮೋಡಗಳ ನರ್ತನ
ಮೂಕ ಮನ ಆವರಣದಲ್ಲಿ
ದುಃಖ ದುಮ್ಮನಗಲ ಅನಾವರಣ
ಸಮಯ ಹರಿದು ಕರಿಮೋಡ ಸರಿದು
ಒಣ ಮರವು ಚಿಗುರೊಡೆದಂತೆ
ಧರೆಗೆ ಮಳೆಗೆ ಆಲಿಂಗನ
ಬರಹದ ಪದ ಪುಂಜಗಳ ರೂಪದಲ್ಲಿ
ಬೆಸೆದು ಕೊಂಡಿತು ನನ್ನೀ ಭಾವಯಾನ

## ಮೂಕವೇದನೆ

ಮರುಭೂಮಿಯ ಮರೀಚಿಕೆ
ಬಾಯಾರಿಕೆಯ ಇಂಗಿಸಿತೆ?
ಸಮಾಧನ ಸಂತ್ವಾನದ ಹೊನ್ನ ನುಡಿಗಳು
ಭರವಸೆಯ ಕಿರಣಗಳ ಮೂಡಿಸುವುದೇ ಮನಕೆ?
ಅಂತ್ಯವಿಲ್ಲದ ಆಗಸದಿ ಒಂಟಿ ಹಕ್ಕಿಯ ಯಾನ
ಕಡಲು ಕಾಣದ ಗೂಡು ಸೇರದ ತೀರಕ್ಕೆ
ಮೂಕ ಹಕ್ಕಿಯ ಪಯಣ.

## ಹಿತನುಡಿ

ಹಿಡಿಯಷ್ಟು ಹೃದಯ
ಅಡಿಯಷ್ಟು ನಾಲಿಗೆ
ಹಿಡಿ ಅಡಿಯಷ್ಟು ಇದ್ದರೂ
ಅಜಗಜಾಂತರದಷ್ಟು ವ್ಯತ್ಯಾಸಗಳು ಇವಕ್ಕೆ
ಎಲುಬುಗಳಿಲ್ಲದ ಬರೀ ರಕ್ತ ಮಾಂಸಗಳ ಹೊದಿಕೆ
ಪ್ರೀತಿಯ ಮಹಲಿಗೆ ಹೆಸರಾಗಿರುವುದು ಒಂದು
ಸ್ಥಿತಿ ಅರಿತು ಮೌನ ಮಾತುಗಳು ಬೆರೆತು
ನುಡಿದರೆ ಸೊಗಸಾಗುವುದು
ಮತ್ತೊಂದು.



**–ಕಾವ್ಯ ಎಂ.ಕೆ.**
ಅಭಿನವ ಭಾರತಿ ಹಿರಿಯ
ಪ್ರಾಥಮಿಕ ಶಾಲೆ
(ಆಂಗ್ಲ ಮಾಧ್ಯಮ)

# ಅಭಿನವ ಭಾರತಿ ಕಾಲೇಜು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ

**"ಹಚ್ಚಹಸುರಿನ ಸುಂದರ ಬೆಟ್ಟಗಳು**
**ಪವಿತ್ರ ನದಿಗಳು, ಸ್ವಚ್ಛಂದ ಮನಸ್ಸಿನ ನಾಡು ನಮ್ಮದು**
**ಸಂಸ್ಕೃತಿಗೆ ತಾಯಿನಾಡು ಅದುವೇ**
**ನಮ್ಮ ಈ ಕರುನಾಡು**
**ಕನ್ನಡ ಭಾಷೆಯನ್ನು ಬಳಸೋಣ**
**ಕನ್ನಡವನ್ನು ಬೆಳೆಸೋಣ"**

ಸಮಸ್ತ ಕನ್ನಡಿಗರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು ದಿನಾಂಕ 1.11.2021ರಂದು ಅಭಿನವ ಭಾರತೀ ಸಂಯುಕ್ತ ಪದವಿಪೂರ್ವ ಕಾಲೇಜು, ಶಂಕರನಗರ ಮಂಡ್ಯ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ನಡೆಸಲಾಯಿತು. ಕಾರ್ಯಕ್ರಮದ ಉಪಸ್ಥಿತಿಯನ್ನು ಹಿರಿಯ ಉಪನ್ಯಾಸಕರಾದ ಪ್ರೊ|| ಕೆ.ಪಿ.ದೊರೆಸ್ವಾಮಿ ಸರ್ ಅವರು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಲೋಕಪ್ರಕಾಶ ನಾರಾಯಣ.ಹೆಚ್.ಟಿ ಸರ್ ವಹಿಸಿದ್ದರು ಹಾಗೂ ಬೋಧಕ ವರ್ಗದವರೆಲ್ಲರೂ ಕಾರ್ಯಕ್ರಮದಲ್ಲಿ ಹಾಜರಿದ್ದರು.

**"ಅಸತೋಮ ಸದ್ಗಮಯ**
**ತಮಸೋಮ ಜ್ಯೋತಿರ್ಗಮಯ**
**ಮೃತ್ಯೋರ್ಮಾ ಅಮೃತಂಗಮಯ"**

ಎಂದು ಹೇಳುತ್ತಾ ಕಾರ್ಯಕ್ರಮದಲ್ಲಿ ಉಪಸ್ಥಿತಿ ವಹಿಸಿದಂತಹ ಪ್ರೊಫೆಸರ್ ಕೆ ಪಿ ದೊರೆಸ್ವಾಮಿ ಸರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ದಂತಹ ಲೋಕ ಪ್ರಕಾಶ್ ನಾರಾಯಣ ಸರ್ ಹಾಗೂ ಬೋಧಕ ವರ್ಗದವರು ಎಲ್ಲರೂ ಸೇರಿ ದೀಪ ಬೆಳಗುವುದರ ಮುಖಾಂತರ ಕನ್ನಡಾಂಬೆಗೆ ನಮನ ಸಲ್ಲಿಸಿದರು.

**"ಚಿರಕಾಲ ಬೆಳಗಲಿ ಕನ್ನಡದ ದೀಪ**
**ಜನಕೆಲ್ಲ ಬೆಳಕಾಗಿ ಪುಣ್ಯ ಪ್ರದೀಪ**
**ಹೊತ್ತಿತೋ ಹೊತ್ತಿತೋ ಕನ್ನಡದ ದೀಪ"**

ಎಂದು ಹೇಳುತ್ತಾ ಕಾರ್ಯಕ್ರಮದಲ್ಲಿ ಉಪಸ್ಥಿತಿ ಇದ್ದಂತಹ ಪ್ರೊಫೆಸರ್ ಕೆ.ಪಿ.ದೊರೆಸ್ವಾಮಿ ಸರ್‌ರವರು ಭಾಷಣದ ಮುಖಾಂತರ ಕರ್ನಾಟಕದ ಹಿನ್ನೆಲೆಯನ್ನು ತಿಳಿಸಿದರು. ಮಾತಿನ ಪ್ರಾರಂಭದಲ್ಲಿ "ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ" ಎಂದು ತಿಳಿಸಿ ಮಾತನ್ನು ಪ್ರಾರಂಭಿಸಿದರು. ಕರ್ನಾಟಕ ರಾಜ್ಯದ ಉದಯಕ್ಕೆ ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾವ್ ನೇತೃತ್ವವಹಿಸಿ ಕರ್ನಾಟಕ ಏಕೀಕರಣ ಚಳುವಳಿಯನ್ನು 1905ರಲ್ಲಿ ಪ್ರಾರಂಭಿಸಿದರು. 1950ರಲ್ಲಿ ಭಾರತವು ಗಣರಾಜ್ಯದ ನಂತರ ಭಾರತದ ಅನೇಕ ಪ್ರಾಂತ್ಯಗಳು ಭಾಷೆಯ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ ಮೈಸೂರು ರಾಜ್ಯವು ಉದಯವಾಯಿತು.

1956 ನವೆಂಬರ್ ಒಂದರಂದು ಮದ್ರಾಸ್ ಮುಂಬೈ ಹೈದರಾಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯ ಉದಯವಾಯಿತು. ಹೊಸದಾಗಿ ರೂಪಗೊಂಡ ಮೈಸೂರು ರಾಜ್ಯವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಯಿತು. ಉತ್ತರ ಕರ್ನಾಟಕ, ಮಲೆನಾಡು ಮತ್ತು ಹಳೆಯ ಮೈಸೂರು ಎಂಬುದಾಗಿ ಗುರುತಿಸಿದರು.

ರಾಜ್ಯಕ್ಕೆ ಹಳೆ ಹೆಸರಾದ ಮೈಸೂರು ಎಂಬ ಹೆಸರನ್ನು ಉಳಿಸಿಕೊಂಡರು. ಆದರೆ ಉತ್ತರ ಕರ್ನಾಟಕದ ಜನರ ತರ್ಕ ಮಾನ್ಯತೆಗಾಗಿ ಡಿ ದೇವರಾಜ್ ಅರಸ್ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯದ ಹೆಸರು ನವೆಂಬರ್ 1. 1973 ರಂದು ಕರ್ನಾಟಕ ಎಂದು ಬದಲಾವಣೆ ಕಂಡಿತು. ಕರ್ನಾಟಕ ರಾಜ್ಯದ ಉದಯದ ಏಳಿಗೆಗಾಗಿ ಅನೇಕ ಕವಿಗಳು ಶ್ರಮಿಸಿದ್ದಾರೆ. ಅವರೆಂದರೆ ಶಿವರಾಮ ಕಾರಂತರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ ಎಂ ಶ್ರೀಕಂಠಯ್ಯ ಮತ್ತಿತರ ವ್ಯಕ್ತಿಗಳು ಕರ್ನಾಟಕದ ಏಳಿಗೆಗಾಗಿ ಶ್ರಮಿಸಿದ್ದಾರೆ.

ಕರ್ನಾಟಕ ಎಂಬ ರಾಜ್ಯದ ಹೆಸರಿನ ಹಿನ್ನೆಲೆ ನೋಡುವುದಾದರೆ ಕರುನಾಡು ಎಂದು ಕನ್ನಡಿಗರು ಕರೆಯುವುದುಂಟು ಆ ಪದದ ಅರ್ಥ ವೆಂದರೆ ಕರು ಮತ್ತು ನಾಡು ಸೇರಿ ಎತ್ತರದ ಭೂಮಿ ಎಂದರ್ಥ. ಕರು ಎಂದರೆ ಕಪ್ಪು ಮಣ್ಣಿನಿಂದ ಕೂಡಿದ ನಾಡೆ ಕರುನಾಡು ಎಂದು ಹೆಸರಾಗಿದೆ ಒಂದು ಕಡೆ ಕುವೆಂಪುರವರು ಕರ್ನಾಟಕದ ಹೆಸರಿನ ಬಗ್ಗೆ ಈ ರೀತಿ ವರ್ಣಿಸಿದ್ದಾರೆ.

**"ಕರ್ನಾಟಕ ಎಂಬುದೇನು**
**ಹೆಸರೆ ಬರಿಯ ಮಣ್ಣಿಗೆ ?**
**ಮಂತ್ರ ಕಣಾ! ಶಕ್ತಿ ಕಣಾ!**
**ತಾಯಿ ಕಣಾ! ದೇವಿ ಕಣಾ!**
**ಬೆಂಕಿ ಕಣಾ! ಸಿಡಿಲು ಕಣಾ!**
**ಕಾವ ಕೊಲುವ ಒಲವ ಬಲವ**
**ಪಡೆದ ಚಲದ ಚಂಡಿ ಕಣಾ"**

ಎಂದು ಕರ್ನಾಟಕದ ವಿಶಿಷ್ಟತೆಯನ್ನು ತಿಳಿಸಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಏಕೀಕರಣಗೊಂಡ ಮೇಲೆ ಹೊಸದಾಗಿ ಉದಯವಾದ ನಮ್ಮ ರಾಜ್ಯಕ್ಕೆ ಧ್ವಜದ ಅವಶ್ಯಕತೆಯನ್ನು ಮನಗಂಡು ಕನ್ನಡದ ಹೋರಾಟಗಾರರಾದ ಎಮ್ ರಾಮ್ ಮೂರ್ತಿ ರವರು ಹಳದಿ ಕೆಂಪು ಬಣ್ಣ ಬಳಸಿ ಧ್ವಜವನ್ನು ಸಿದ್ಧಪಡಿಸಿದರು ಹಳದಿ ಬಣ್ಣ ಶಾಂತಿ ಸೌಹಾರ್ದತೆ ಸಂಕೇತ ವಾಗಿ ಸೂಚಿಸಿದರೆ ಕೆಂಪು ಬಣ್ಣ ಕ್ರಾಂತಿಯ ಸಂದೇಶವನ್ನು ನೀಡುತ್ತದೆ ಎಂದು ತಿಳಿಸಿಕೊಟ್ಟರು.

ಕರ್ನಾಟಕದ ಹಿನ್ನೆಲೆಯನ್ನು ತಿಳಿದ ನಂತರ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು ಕನ್ನಡ ನಾಡು ನುಡಿ ಪ್ರಕೃತಿ ಜಲ ಇವುಗಳಿಗೆ ಸಂಬಂಧಪಟ್ಟಂತಹ ಗೀತಗಾಯನ ಹಾಗೂ ಸಮೂಹ ನೃತ್ಯ ಎಲ್ಲವೂ ಜರಗಿದವು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದಂತಹ ಕಾಲೇಜಿನ ಪ್ರಾಂಶುಪಾಲರಾದ ಲೋಕಪ್ರಕಾಶ್ ನಾರಾಯಣ ಸರ್‌ರವರು ಅಧ್ಯಕ್ಷರ ನುಡಿಯನ್ನು ತಿಳಿಸಿದರು. ಅದೇನೆಂದರೆ ಕನ್ನಡ ಭಾಷೆಯು ಸುಮಾರು ಎರಡುವರೆ ಸಾವಿರ ವರ್ಷದ ಇತಿಹಾಸವನ್ನು ನಮ್ಮ ಭಾಷೆ ಒಳಗೊಂಡಿದೆ. ನಮ್ಮ ಕರುನಾಡು "ಕಾವೇರಿಯಿಂದಮಾ ಗೋದಾವರಿಯ ವರಮಿರ್ದ ನಾಡದಾ ಕನ್ನಡದೊಳ್" ಎಂದು ಕರ್ನಾಟಕದ ವಿಸ್ತಾರವನ್ನು ಕವಿರಾಜಮಾರ್ಗದಲ್ಲಿ ಉಲ್ಲೇಖವಾಗಿರುವ ರೀತಿಯಲ್ಲಿ ತಿಳಿಸಿದರು. ಅದೇ ರೀತಿಯಾಗಿ ನಮ್ಮ ಕನ್ನಡ ಭಾಷೆ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ತನ್ನ ತೆಕ್ಕೆಗೆ ಬಾಚಿಕೊಂಡಿದೆ ಎಂದು ಹೇಳಿದರು. ಕನ್ನಡ ಭಾಷೆ ಎಂಬುದು ಯಾವಾಗಲೂ ತಾಯಿಯ ಸಮಾನ ಎಂದು ನಮ್ಮ ಕನ್ನಡ ಭಾಷೆಯನ್ನು ಹೆತ್ತ ತಾಯಿಗೆ ಸಮೀಕರಿಸಿ ಮಾತುಗಳನ್ನು ಹಾಡಿದರು. ಮಾತೃಭಾಷೆಯಲ್ಲಿ ಶಿಕ್ಷಣ ನೀಡಿದರೆ ಎಲ್ಲಾ ಮಕ್ಕಳಿಗೂ ಮನದಟ್ಟಾಗುತ್ತದೆ ಎಂದು ಹೇಳಿದರು. ಭಾಷೆಯೆಂಬುದು ನಿಂತ ನೀರಲ್ಲ ಸದಾ ಬದಲಾವಣೆ ಹೊಂದುತ್ತದೆ ಹಾಗಾಗಿ ಭಾಷೆಯ ಬಳಕೆಯಲ್ಲಿ ನಮಗೆ ಹಿಡಿತವಿರಬೇಕು ಕನ್ನಡ ಭಾಷೆಯನ್ನು ನಾವು ಹೊರದೇಶದ, ಹೊರರಾಜ್ಯದ ಜನರಿಗೆ ಕಲಿಸಬೇಕು. ನಾವೇ ಅವರ ಭಾಷೆಯನ್ನು ಕಲಿಯಬಾರದು ಕಲಿತರು ಸಂದರ್ಭ ಸಮಯೋಚಿತವಾಗಿ ಬಳಸಬೇಕು ಪ್ರತಿಯೊಬ್ಬ ಕನ್ನಡಿಗನು ಈ ದೃಢಸಂಕಲ್ಪ ಮಾಡಿ ಜೀವನದಲ್ಲಿ ಮುನ್ನಡೆದರೆ ಭಾಷೆಯ ಬೆಳವಣಿಗೆ ತಾನಾಗೆ ಆಗುತ್ತದೆ. ಕನ್ನಡ ನಾಡಿನ ಭಾಷೆಯ ಹಿನ್ನೆಲೆ ಹಾಗೂ ಭಾಷೆಯ ಬೆಳವಣಿಗೆಗೆ ಯಾರು ಶ್ರಮಿಸಬೇಕು ಎಂದು ಈ ಮಹತ್ವದ ವಿಚಾರವನ್ನು ನುಡಿದರು.

ಕನ್ನಡ ರಾಜ್ಯೋತ್ಸವದ ಮಹತ್ವವನ್ನು ನೋಡುವುದಾದರೆ ನಮ್ಮ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯೋತ್ಸವದ ದಿನದಂದು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಮಾಡಿದ ಅನೇಕ ಸಾಧಕರಿಗೆ ಪ್ರಶಸ್ತಿ ಪ್ರಕಟ ಮಾಡಲಾಗುತ್ತದೆ. ರಾಜ್ಯೋತ್ಸವ ಇಷ್ಟಕ್ಕೆ ಮಾತ್ರ ಸೀಮಿತವಲ್ಲದೆ ನೆರೆ ರಾಜ್ಯಗಳಲ್ಲಿ ನೆಲೆಸಿರುವ ಕನ್ನಡಿಗರು ರಾಜ್ಯೋತ್ಸವ ಆಚರಿಸುತ್ತಾರೆ. ಸಾಗರೋತ್ತರದಲ್ಲಿ ಕನ್ನಡದ ಸಂಸ್ಥೆಗಳು ಅಲ್ಲಿರುವ ಕನ್ನಡಿಗರು ಎಲ್ಲರೂ ಸೇರಿ ಕನ್ನಡ ರಾಜ್ಯೋತ್ಸವ ಆಚರಿಸುತ್ತಾರೆ. ಅಮೇರಿಕಾ, ಸಿಂಗಪೂರ್, ದಕ್ಷಿಣ ಕೊರಿಯಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲ್ಯಾಂಡ್ ಮೊದಲಾದ ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರುಕನ್ನಡ ರಾಜ್ಯೋತ್ಸವವನ್ನು ಆಚರಿಸು ತ್ತಾರೆ. ಒಟ್ಟಾರೆಯಾಗಿ ಪ್ರತಿಯೊಬ್ಬ ಕನ್ನಡದ ಕಂದನಿಗೆ ಒಂದು ಕಿವಿಮಾತು,

**"ಎಲ್ಲಾದರು ಇರು**
**ಎಂತಾದರು ಇರು**
**ಎಂದೆಂದಿಗೂ ನೀ ಕನ್ನಡವಾಗಿರು"**

ಎಂದು ಹೇಳುತ್ತಾ ಮಾತುಗಳನ್ನು ಮುಕ್ತಾಯ ಗೊಳಿಸಿದರು. ಕಾರ್ಯಕ್ರಮ ಯಶಸ್ವಿಯಾಗಿ ಮೂಡಿಬಂದಿತು.

**ಜೈ ಹಿಂದ್ ಜೈ ಕರ್ನಾಟಕ ಮಾತೆ**

**–ಕೆ.ಪಿ ಸಂದೇಶ್**
**ಅಭಿನವ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು**
**ಶಂಕರ ನಗರ, ಮಂಡ್ಯ.**

# ಸ್ತ್ರೀಯ ನೋವಿನ ಬದುಕು...

***...11ನೇ ಪುಟದಿಂದ***

ಏನೆಂದರೆ ಯಾರನ್ನು ಅತಿಯಾಗಿ ನಂಬಿದರೆ ಕೊನೆಗೆ ಸಿಗುವ ಪ್ರತಿಫಲ ಮೋಸ, ವಂಚನೆ ಹಾಗೂ ನಮಬಿಕೆ ದ್ರೋಹ. " ನಂಬಿಕೆ" ಎಂಬುವುದು ಬೆಲೆ ಕಟ್ಟಲಾಗದಷ್ಟು ದೊಡ್ಡ ಪದ. ನಂಬಬೇಕು ಆದರೆ ಅತಿಯಾಗಿ ಅಲ್ಲ. ಅತಿಯಾದರೆ ಅಮೃತವೂ ವಿಷ ಎಂಬಂತೆ. "ಛಲ, ಶಕ್ತಿ, ಧೈರ್ಯ ಹಾಗೂ ಶ್ರಮಕ್ಕೆ ಇವೆಲ್ಲಾ ಇದ್ದರೆ ಕಷ್ಟಕ್ಕೆ ತಕ್ಕ ಪ್ರತಿಫಲ ಸಿಗುವುದು" ಎಂಬುದು ಈ ಕಥೆಯ ಪೂರ್ಣ ಅರ್ಥವಾಗಿದೆ.



**–ಜ್ಯೋತಿ ಲಕ್ಷ್ಮಿ. ಎನ್**
ಪ್ರಥಮ ಪಿಯುಸಿ (ವಿಜ್ಞಾನ ವಿಭಾಗ)
ಅಭಿನವ ಭಾರತಿ ಸಂಯುಕ್ತ
ಪದವಿ ಪೂರ್ವ ಕಾಲೇಜು
ಶಂಕರ ನಗರ, ಮಂಡ್ಯ.

# ಗೆಳೆತನವೆಂಬ ಸಂಬಂಧಗಳ ನಡುವೆ ಒಂದು ಸುತ್ತು...

ಚಡ್ಡಿಯನ್ನೂ ಹಾಕಲು ಬಾರದ ದಿನಗಳಲ್ಲಿ ಕಲ್ಲು ಮಣ್ಣು ಕಡ್ಡಿ ಬೊಂಬೆ ಚಾಕಲೇಟುಗಳಿಗೆ ಜಗಳವಾಡುತ್ತಾ ಸ್ವಲ್ಪ ಮುನಿಸು, ತುಸು ಪ್ರೀತಿಗಳ ತಾತ್ಕಾಲಿಕ ಭಾವನೆಗಳಿಂದ ಸ್ನೇಹದ ಮೊದಲ ಆಟ ಪ್ರಾರಂಭವಾಗುತ್ತದೆ...

ಅಕ್ಕ ಪಕ್ಕದ ಮನೆಯ ಸಹಪಾಠಿಗಳು, ಶಿಶುವಿಹಾರದಿಂದ ಕಾಲೇಜುಗಳವರೆಗೂ ದಂಡಿಯಾಗಿ ಗೆಳೆಯರ ಗುಂಪುಗಳು ಜೊತೆಯಾಗುತ್ತದೆ...

ಸಮಾರಂಭಗಳಲ್ಲಿ,

ಬಸ್ಸು ರೈಲು ವಿಮಾನಗಳ ಪ್ರಯಾಣದಲ್ಲಿ, ದೇವಸ್ಥಾನ ಹೋಟೆಲು ಪಾರ್ಕುಗಳಲ್ಲಿ, ಸಂಘ ಸಂಸ್ಥೆಗಳ ಚಟುವಟಿಕೆಗಳಲ್ಲಿ, ಚಳವಳಿ ಹೋರಾಟದ ಸಮಯದಲ್ಲಿ, ಉದ್ಯೋಗ ವ್ಯವಹಾರಗಳ ಸ್ಥಳಗಳಲ್ಲಿ, ಜೈಲು ಆಸ್ಪತ್ರೆ ಆಶ್ರಮ ಕಚೇರಿಗಳಲ್ಲಿ, ಹೀಗೆ ಎಲ್ಲೆಂದರಲ್ಲಿ ಸ್ನೇಹ ಬೆಳೆಯಬಹುದು.

ಆದರೆ ಸಮೂಹ ಸಂಪರ್ಕ ಮಾಧ್ಯಮಗಳ ಬೆಳವಣಿಗೆಯೊಂದಿಗೆ ಗೆಳೆತನ ಹೊಸ ಅರ್ಥವನ್ನು ಮತ್ತು ಹೊಸ ರೂಪವನ್ನು ಪಡೆದುಕೊಂಡಿತು.

ಸಾಮಾನ್ಯವಾಗಿ ಸ್ನೇಹವೆಂದರೆ ಮುಖಾಮುಖಿ ಮಿಲನದಲ್ಲಿ ಏರ್ಪಡುತ್ತದೆ ಎಂಬ ಮೂಲ ನಂಬಿಕೆಯೇ ಬುಡಮೇಲಾಗಿ ಒಬ್ಬರಿಗೊಬ್ಬರು ಮುಖತಃ ಭೇಟಿಯಾಗದೆಯೂ ಸಹ ಗೆಳೆತನ ಮಾಡಬಹುದು ಎಂಬ ಸಾಧ್ಯತೆಯನ್ನು ಸೋಷಿಯಲ್ ಮೀಡಿಯಾಗಳು ತೋರಿಸಿಕೊಟ್ಟಿವೆ...

ಹಾಗಾದರೆ ಗೆಳೆತನದ ಆಳ–ಅಗಲ, ಜೊಳ್ಳು–ಗಟ್ಟಿತನ, ಸಹಜ–ಮುಖವಾಡ, ನಿಸ್ವಾರ್ಥ–ಕೃತಕ ಇತ್ಯಾದಿ ಭಾವಗಳನ್ನು ಅಳೆಯುವುದಾದರೂ ಹೇಗೆ?

ಇದು ಅನುಭವ – ಅರಿವು – ಅಕ್ಷರ – ಭಾವನೆ – ನಂಬಿಕೆ – ವೈಚಾರಿಕತೆಗೂ ನಿಲುಕದಷ್ಟು ವಿಸ್ತಾರವನ್ನು ಹೊಂದಿದೆ. ಇದು ಹೀಗೇ ಎಂದು ನಿರ್ಧರಿಸಲು ಸಾಧ್ಯವೇ ಇಲ್ಲ. ಕೇವಲ ನಮ್ಮ ಜ್ಞಾನದ ಮಿತಿಯಲ್ಲಿ ಒಂದು ಅಭಿಪ್ರಾಯ ಅನಿಸಿಕೆ ವ್ಯಕ್ತಪಡಿಸಬಹುದಷ್ಟೆ.

ಯೌವನದ ದಿನಗಳವರೆಗೂ ಸಾಮಾನ್ಯ ಸ್ಥಿತಿಯಲ್ಲಿ ಸ್ನೇಹ ಉತ್ತಮ ಬಾಂಧವ್ಯವನ್ನು ಹೊಂದಿರುತ್ತದೆ. ಕಷ್ಟ ಸುಖಗಳಿಗೆ ಒಂದಷ್ಟು ಸ್ಪಂದನೆ ಇರುತ್ತದೆ.

ಯೌವ್ವನದ ದಿನಗಳನ್ನು ದಾಟಿ ಉದ್ಯೋಗ ಸಂಘಟನೆ ವಿವಾಹ ವ್ಯವಹಾರ ಮುಂತಾದ ಬದುಕಿನ ಮುಂದಿನ ಪಯಣದಲ್ಲಿ ಸ್ನೇಹ ಬಹಳಷ್ಟು ಶಿಥಿಲಾಗುತ್ತಾ ಸಾಗುತ್ತದೆ.

ನೀನು ಮೊದಲು ಎಂಬ ಭಾವ ಹಿನ್ನೆಲೆಗೆ ಸರಿದು ನಾನು ಮೊದಲು ಎಂಬ ಭಾವ ಮುನ್ನಲೆಗೆ ಬರುತ್ತದೆ.

ಇದು ಭಾರತೀಯ ಸಮಾಜದ ಸಹಜ ನಡವಳಿಕೆ.

ಗೆಳೆತನದ ಗಾಢತೆ ಮತ್ತು ಆಪ್ತತೆಯನ್ನು ಅರಿಯುವುದು ಒಂದು ದೊಡ್ಡ ಸವಾಲು.

ನನ್ನ ವೈಯಕ್ತಿಕ ಅನುಭವದ ಆಧಾರದಲ್ಲಿ...

ಗೆಳೆತನದ ಅವಧಿ ಕನಿಷ್ಠವೆಂದರೂ 4/5 ವರ್ಷಗಳಷ್ಟು ದೀರ್ಘಕಾಲ ತನ್ನ ಸಹಜತೆಯನ್ನು ಕಾಪಾಡಿಕೊಂಡಿರಬೇಕು.

ಗೆಳೆತನ ಪರಿಚಯದ ಹಂತವನ್ನೂ ಮೀರಿ ತನ್ನ ಕೊಡು ಕೊಳ್ಳುವಿಕೆಯಲ್ಲಿ ಆಪ್ತತೆ ಹೊಂದಿರಬೇಕು.

ಗೆಳೆತನ ಪ್ರೀತಿಯಷ್ಟು ಗಾಢವಲ್ಲದಿದ್ದರೂ ನಮ್ಮ ಇಲ್ಲದಿರುವಿಕೆಯ ಸಮಯದಲ್ಲೂ ಸದಾ ನಮ್ಮನ್ನು ಕಾಡುತ್ತಲೇ ಇರಬೇಕು.

ಗೆಳೆತನ ಅನೇಕ ಅಗ್ನಿ ಪರೀಕ್ಷೆಗಳನ್ನು ದಾಟಿಯೂ ಅದೇ ಸ್ಪಂದನೆ ಉಳಿಸಿಕೊಂಡಿರಬೇಕು.

ಎಲ್ಲಕ್ಕಿಂತ ಮುಖ್ಯವಾಗಿ ಅದು ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸಿ ತನ್ನ ಘನತೆಯನ್ನು ಕಾಪಾಡುವಂತೆ ಇರಬೇಕು.

ಸ್ವಾರ್ಥವಿಲ್ಲದ ಯಾವ ಭಾವವೂ ಪರಿಪೂರ್ಣವಲ್ಲ. ಆದ್ದರಿಂದ ಸ್ನೇಹದಲ್ಲಿ ಸ್ವಲ್ಪ ಸ್ವಾರ್ಥವೂ ಬೆರೆತಿರಬೇಕು.

ಹಾಗೆಯೇ ವರ್ಣಿಸಲಾಗದ ಪದಗಳಿಗೆ ನಿಲುಕದ ಒಂದು ಅವರ್ಣನೀಯ ಸೆಳೆತ ಇರುವ ಭಾವವೇ ನಿಜವಾದ ಗೆಳೆತನ.

ಇವುಗಳಿಲ್ಲದ ಸಂಬಂಧಗಳು ಕೇವಲ ಪರಿಚಯದ ಮಟ್ಟದಲ್ಲಿಯೇ ಉಳಿಯುತ್ತದೆ.

ಗೆಳೆತನದ ಭಾವ ಸಂಪೂರ್ಣ ಆವರಿಸುವವರೆಗೂ ನಾವು ಅದಕ್ಕೆ ಕಾಲಾವಕಾಶ ಕೊಡಬೇಕು.

ಅಂತಹ ಸಂಧರ್ಭಗಳಲ್ಲಿ ನಾವು ಸಂಪೂರ್ಣ ಮುಕ್ತವಾಗುವ ಮೊದಲು ಒಂದಷ್ಟು ಎಚ್ಚರಿಕೆಯ ನಡೆ ಇಡಬೇಕಾಗುತ್ತದೆ. ಇದೊಂದು ಸರಳ ನಿರೂಪಣೆ.

ಇದನ್ನು ಮೀರಿಯೂ ಸ್ನೇಹವೆಂಬುದು ಬಹಳಷ್ಟು ಅರ್ಥಗಳನ್ನು ಹೊಂದಿದೆ. ★

# ಶ್ರೀ ಶ್ರೀ ಅನಂತ ಕುಮಾರ ಸ್ವಾಮೀಜಿ

ಇದು ಇಡೀ ದೇಶದಲ್ಲೇ ಬಹಳ ವಿಚಿತ್ರ ಜಾಗ ಅನ್ನಿಸಿತು. ಒರಟಾಗಿ ಮಾತಾಡ್ತಾರೆ, ಆದರೆ ತಕ್ಷಣ ತಣ್ಣಗಾಗ್ತಾರೆ, ಪ್ರೀತಿ ತೋರಿಸ್ತಾರೆ. ಇಲ್ಲಿ ಏನೋ ವಿಶೇಷವಿದೆ. ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂಬ ತುಡಿತದಲ್ಲಿ ಹೊರಟರು. ಅವರ ಗುಣ ನನಗೆ ತುಂಬಾ ಇಷ್ಟವಾಯ್ತು. ನಾನು ಏನಾದರೂ ಸಮಾಜಕ್ಕೆ ಕೊಡುಗೆ ಕೊಡಬೇಕು ಎಂಬ ಛಲ ಬಂತು. ಈ ಸಂಸ್ಥೆಯಲ್ಲಿ ಓದುವುದಕ್ಕೆ ತುಂಬಾನೆ ಖುಷಿಕೊಡುತ್ತೆ. ಇಲ್ಲಿ ಮಾಡೋ ಪಾಠ, ಸಾಂಸ್ಕೃತಿಕ ಚಟುವಟಿಕೆಗಳು ಮನಸ್ಸಿಗೆ ಖುಷಿ ಕೊಡುತ್ತದೆ. ಸ್ವಾಮೀಜಿ ಮಾಡೋ ಭಾಷಣ ನನಗೆ ತ ಮಾನಸಿಕವಾಗಿ ತುಂಬಾ ಪ್ರೇರಣೆ ನೀಡಿದೆ. ಅವರು ಮಾತನಾಡುವಾಗ ತುಂಬಾ ಪ್ರೇರಣೆ ನೀಡಿದೆ. ಅವರು ಶಿಕ್ಷಣವಲ್ಲದೆ ಬೇರೆ ಚಟುವಟಿಕೆಗಳಿಗೆ ಪ್ರಾಮುಖ್ಯತೆ ನೀಡುತ್ತಿದ್ದರು. ಮಕ್ಕಳಿಗೆ ಸಾಂಪ್ರದಾಯಿಕ ವಿದ್ಯೆಯ ಜೊತೆಗೆ ಆಧ್ಯಾತ್ಮ, ಕಲೆ, ಸಾಹಿತ್ಯ, ನೈತಿಕ ಶಿಕ್ಷಣ ಸೇರಿದಂತೆ ಸೃಜನಾತ್ಮಕವಾಗಿ ಮಕ್ಕಳಿಗೆ ಶಿಕ್ಷಣ ಕೊಟ್ಟಿದ್ದು ಎಲ್ಲ ಮಕ್ಕಳಿಗೂ ಅನುಕೂಲವಾಯ್ತು. ಅದರಲ್ಲಿ ನಾನು ಒಬ್ಬಳು ಎಲ್ಲರಿಗೂ ಉತ್ತಮ ಶಿಕ್ಷಣ ನೀಡಲು ಹಲವು ಶಿಕ್ಷಣ ಸಂಸ್ಥೆಗಳನ್ನು ಆರಂಬಿಸಿದ್ದರು. ಅವರು ಯೋಗದಿಂದ ಉತ್ತಮ ಆರೋಗ್ಯ ಹಾಗೂ ಶಿಕ್ಷಣಕ್ಕೆ ಒತ್ತು ನೀಡಿದ್ದರು.

ಇದೆಲ್ಲ ಗಮನಿಸಿದ ರಾಜ್ಯ ಸರ್ಕಾರ ಇವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದೆ.ನಾನು ಹೀಗೆ ಇರಬೇಕು ಎಂದು ಪ್ರಯತ್ನ ಮಾಡುತಿದ್ದೀನಿ. ಇವರು ಹೇಳಿದ್ದು ಒಂದೇ ಮಾತು. ಯಾರಿಗೂ ಮೊದಲ ಪ್ರಯತ್ನದಲ್ಲಿ ಪ್ರತಿಫಲ ಸಿಗುವುದಿಲ್ಲ. ಪ್ರಯತ್ನ, ಮತ್ತೆ ಪ್ರಯತ್ನ ಮಾಡು ಕಂಡಿತ ಪ್ರತಿಫಲ ಸಿಗುತ್ತೆ ಎಂದಿಗೂ ನಿನ್ನ ಗುರಿ ಬಿಡಬೇಡ ಎಂದು ಹೇಳಿದ ಮಾತು ನನ್ನ ಜೀವನವನ್ನೇ ಬದಲಾವಣೆ ಮಾಡಿದೆ.

ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕೆಂದರೆ ಹುಟ್ಟೂರಿನಿಂದ ದೂರವೇ ಇರಬೇಕು ಎಂಬ ನಂಬಿಕೆ ಕಟುಬದ್ಧವಾಗಿದ್ದರು. ಕೇವಲ 10 ಮಕ್ಕಳಿಂದ ಶಾಲೆ ಆರಂಭಗೊಂಡಿತು. ನಂತರ ಅದು ಸಾವಿರಾರು ಮಕ್ಕಳಿಗೆ ಆಲದ ಮರವಾಗಿ ರೂಪಗೊಂಡಿದೆ.

ನನ್ನ ಪ್ರಕಾರ ತಾವು ಜನಿಸಿದ ರಾಜ್ಯವನ್ನು ಬಿಟ್ಟು ಬೇರೆ ರಾಜ್ಯಕ್ಕೆ ಬಂದು ಸಾಧನೆ ಮಾಡುವುದು ತುಂಬಾನೆ ಅಸಾಧ್ಯ, ಆದರೆ ಅವರು ಸಾಧ್ಯ ಮಾಡಿ ತೋರಿಸಿದ್ದಾರೆ. ಇವರ ಜೀವನ ಚರಿತ್ರೆ ಓದಿದ ಎಲ್ಲಾ ವ್ಯಕ್ತಿಗಳೂ ಏನಾದರೂ ಸಾಧನೆ ಮಾಡಬೇಕು ಎಂಬ ಹಂಬಲ ಅದರಲ್ಲೂ ನಾನು ಕೂಡ ಒಬ್ಬಳು. ಸಾಧನೆ ಹೀಗೇ ಇರಬೇಕು ಎಂದರೆ ಇತಿಹಾಸದಲ್ಲಿ ಒಂದು ಪುಟ ಇರಬೇಕು ಅದನ್ನು ಸ್ವಾಮೀಜಿ ನಮಗೆ ಕಲಿಸಿಕೊಟ್ಟರು. ಅಸಾಧ್ಯವಲ್ಲ ಎಂಬುದನ್ನು ಸಾಧ್ಯ ಮಾಡಿ ಎಲ್ಲರೂ ಮೆಚ್ಚಿಗೆಗೆ ಪಾತ್ರರಾಗಿ ನಾನು ಈ ಸಂಸ್ಥೆಗೆ ಈನಾದರೂ ಕೊಡುಗೆ ಕೊಡಬೇಕು. ಒಳ್ಳೆ ಹೆಸರು ಕೊಡಬೇಕು. ಇಲ್ಲಿ ಓದಿದ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಸ್ಥಾನದಲ್ಲಿ ಇದ್ದರೇ ನಮಗೂ ಅವರನ್ನು ನೋಡಿದಾಗ ಮತ್ತು ಅವರ ಮಾತು ಕೇಳಿದಾಗ ನಮ್ಮ ಮನಸ್ಸಿನಲ್ಲಿ ಛಲ ಬರುತ್ತೆ. ಮನುಶ್ಯ ಹುಟ್ಟಿದಾಗ ಏನಾದರೂ ಸಾಧನೆ ಮಾಡಬೇಕು. ಅದೇ ಜೀವನ. ಸ್ವಾಮೀಜಿಯವರು ತುಂಬಾ ಸರಳ ವ್ಯಕ್ತಿ. ಅದನ್ನು ನಮ್ಮ ಜೀವನದಲ್ಲಿ ರೂಪಿಸಿಕೊಳ್ಳೋದು ತುಂಬಾ ಕಷ್ಟ. ಅವರ ಗುಣ ಮತ್ತು ವ್ಯಕ್ತಿತ್ವ ಅವರಿಂದ ಕಲಿಯೋದು ತುಂಬಾ ಇದೆ.

ಮನುಷ್ಯ ಹುಟ್ಟಿದಾಗ ಏನಾದರೂ ಸಾಧನೆ ಮಾಡಬೇಕು ಅದೇ ಜೀವನ ಸ್ವಾಮೀಜಿಯವರು ತುಂಬಾ ಸರಳ ವ್ಯಕ್ತಿ. ಅವರು ಈ ಸಂಸ್ಥೆಗೆ ಕೊಟ್ಟ ಕೊಡುಗೆ ಅಮರವಾದುದು. ಈ ಸಂಸ್ಥೆ ಯಲ್ಲಿ ನನಗೆ ತುಂಬಾ ಇಷ್ಟವಾದುದು ಶಿಕ್ಷಕರು ಮಾಡೋ ಭೋಧನೆ. ಗ್ರಾಮೀಣ ಮಕ್ಕಳಿಗೆ ಈ ಸಂಸ್ಥೆಯಿಂದ ತುಂಬಾ ಉಪಯೋಗವಾಗಿದೆ. ನನಗೆ ಚಿಕ್ಕಂದಿನಿಂದಲೂ ಈ ಸಂಸ್ಥೆಯ ಬಗ್ಗೆ ತುಂಬಾ ಗೌರವವಿದ್ದು, ಇನ್ನೂ ಹೆಚ್ಚು ಉತ್ತುಂಗಕ್ಕೆ ಬೆಳೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಸ್ವಾಮೀಜಿ ಬಗ್ಗೆ ಎಷ್ಟು ಬರೆದರೂ ತೀರುವುದಿಲ್ಲ. ಅವರ ಕೊಡುಗೆ, ಶಿಕ್ಷಣಕ್ಕೆ ಕೊಟ್ಟ ಪ್ರಾಮುಖ್ಯತೆ ಎಂದೆಂದೂ ಅಮರವಾದುದು.



**–ಪ್ರಿಯಾಂಕ ಎಂ ಎಸ್**
ಪ್ರಥಮ ಪಿಯುಸಿ
(ವಿಜ್ಞಾನ ವಿಭಾಗ)
ಅಭಿನವ ಭಾರತಿ ಸಂಯುಕ್ತ
ಪದವಿ ಪೂರ್ವ ಕಾಲೇಜು